
DGRV german cooperation DEUTSCHE ZUSAMMENARBEIT Implemented by giz SKILLGREEN GLOBAL myrada 50 Years BUILDING POOR PEOPLE'S INSTITUTIONS

# ವಿನಿಮಯ

# 3

## ರೈತ ಉತ್ಪಾದಕ ಸಂಸ್ಥೆಗಳಲ್ಲಿ ಸದಸ್ಯತ್ವ






**ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ**


ತೋಟಗಾರಿಕೆ ಇಲಾಖೆ – ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ

ಕರ್ನಾಟಕ ಸರ್ಕಾರ

ಸಹಯೋಗ

ಮಹಿಳಾ ಅಭಿವೃದ್ಧಿ ಸೊಸೈಟಿ [ಎಪಿಎಮ್ಎಎಸ್] – ಹೈದ್ರಾಬಾದ


# ಸದಸ್ಯರ ಭಾಗವಹಿಸುವಿಕೆ



# ವಿನಿಮಯ 3

# ರೈತ ಉತ್ಪಾದಕ ಸಂಸ್ಥೆಗಳಲ್ಲಿ ಸದಸ್ಯತ್ವ

**ಆಡಳಿತ ಮಂಡಳಿ ಸದಸ್ಯರಿಗೆ**
**ಕಲಿಕಾ ಕೈಪಿಡಿ**





**ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ**

ತೋಟಗಾರಿಕೆ ಇಲಾಖೆ – ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ

ಕರ್ನಾಟಕ ಸರ್ಕಾರ

ಸಹಯೋಗ

ಮಹಿಳಾ ಅಭಿವೃದ್ಧಿ ಸೊಸೈಟಿ [ಎಪಿಎಮ್‌ಎಎಸ್] – ಹೈದ್ರಾಬಾದ

# ವಿನಿಮಯ

# ರೈತ ಉತ್ಪಾದಕರ ಸಂಸ್ಥೆಯಲ್ಲಿ ಸದಸ್ಯತ್ವ


| | | |
|---|---|---|
| ಪ್ರಥಮ ಮುದ್ರಣ | : | 2020 |
| ಪ್ರತಿಗಳು | : | 1000 |
| ಬೆಲೆ | : | ರೂ.150.00 |
| ಪ್ರಕಾಶಕರು | : | ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ, ಬೆಂಗಳೂರು. |
| ಸಹಯೋಗ | : | |

ಈ ತರಬೇತಿ ಮಾರ್ಗದರ್ಶಿಯನ್ನು ಮಹಿಳಾ ಅಭಿವೃದ್ಧಿ ಸೊಸೈಟಿ ಹಾಗೂ ಡಿ.ಜಿ.ಆರ್.ವಿ. ಜೆರ್ಮನಿ ಇವರಿಂದ ಮುದ್ರಿಸಲಾದ ಮೆಂಬರ್‌ಶಿಪ್ಪ್ ಇನ್ ಫಾರ್ಮರ್ ಪ್ರೋಡ್ಯೂಸರ್ ಆರ್ಗನೈಜೇಷನ್ – ವಿನಿಮಯ ಎಂಬ ತರಬೇತಿ ಮಾರ್ಗದರ್ಶಿಯ ಇಂಗ್ಲೀಷ್ ಅವತರಣಿಕೆಯನ್ನು ಕನ್ನಡಕ್ಕೆ ಭಾಷಾಂತರಿಸಿ ಅಗತ್ಯತೆಗೆ ಅನುಸಾರವಾಗಿ ಮಾರ್ಪಾಡು ಮಾಡಿ ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ, ಬೆಂಗಳೂರು ಇವರಿಂದ ಮುದ್ರಿಸಲಾಗಿದೆ.



ಸಂಕಲನ

ಡಾ.ಅಶೋಕ ಎಸ್. ಆಲೂರ, ನಿರ್ದೇಶಕರು, ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ, ಬೆಂಗಳೂರು.
ಡಾ.ಜಿ. ಬಸವರಾಜ್, ಉಪ ನಿರ್ದೇಶಕರು, ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ, ಬೆಂಗಳೂರು.
ಡಾ. ಇಟಗಿ ಪ್ರಭಾಕರ್, ಸಲಹೆಗಾರರು, ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ, ಬೆಂಗಳೂರು.
ಶ್ರೀ. ಮಂಜುನಾಥ ಎಂ., ಹಿರಿಯ ಸಲಹೆಗಾರರು, ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ, ಬೆಂಗಳೂರು.
ಡಾ.ಶಶಿಭೂಷಣ ಅ. ಘಟ್ನಟ್ಟಿ, ಹಿರಿಯ ಸಲಹೆಗಾರರು, ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ, ಬೆಂಗಳೂರು.
ಡಾ.ಕೆ.ಜೆ.ಪರಮೇಶ್ವರಪ್ಪ, ಹಿರಿಯ ಸಲಹೆಗಾರರು, ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ, ಬೆಂಗಳೂರು.
ಡಾ.ಎಸ್. ಕುಮಾರ್.ಹಿರಿಯ ಫೆಲೊ, ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ, ಬೆಂಗಳೂರು.

# ಮುನ್ನುಡಿ

ಕೃಷಿ ಹಾಗೂ ತೋಟಗಾರಿಕೆ ಕ್ಷೇತ್ರಗಳು ದೇಶದ ಆರ್ಥಿಕತೆಯ ಪ್ರಮುಖ ಆಧಾರ ಸ್ಥಂಭಗಳಲ್ಲಿ ಒಂದಾಗಿದ್ದು, ಗ್ರಾಮೀಣ ಪ್ರದೇಶದ ಕೃಷಿ ಆಧಾರಿತ ಸಮುದಾಯಗಳಿಗೆ ಆದಾಯ, ಉದ್ಯೋಗ, ಆಹಾರ ಹಾಗೂ ಪೌಷ್ಠಿಕಾಂಶದ ಭದ್ರತೆಯ ಮೂಲವಾಗಿವೆ. ದೇಶದ ಜನಸಂಖ್ಯೆಯ ಮೂರನೇ ಎರಡರಷ್ಟು ಪ್ರಮಾಣದ ಜನಸಂಖ್ಯೆಯು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳ ಮೇಲೆ ಅವಲಂಬಿತರಾಗಿದ್ದಾರೆ. ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ತಂತ್ರಜ್ಞಾನ ಮಾಹಿತಿ, ಬಂಡವಾಳ ಮತ್ತು ಮಾರುಕಟ್ಟೆಯ ಮಾಹಿತಿ ಹಾಗೂ ಸೌಲಭ್ಯಗಳ ಹಲವಾರು ಸವಾಲುಗಳನ್ನು ಎದುರುಸುತ್ತಿರುವುದು ಒಂದಡೆಯಾದರೇ ಮತ್ತೊಂದೆಡೆ, ಆಹಾರ ಸಂಸ್ಕರಣಾ ಘಟಕಗಳಿಗೆ ಕೃಷಿ ಅವಲಂಬಿತ ಕಚ್ಚಾ ವಸ್ತುಗಳನ್ನು ರೈತರಿಂದ ನೇರವಾಗಿ ಖರೀದಿಸಲು ಹೆಚ್ಚಿನ ವಹಿವಾಟು ವೆಚ್ಚದಿಂದಾಗಿ ನಷ್ಟವಾಗುತ್ತದೆ ಇದರಿಂದಾಗಿ ಆಹಾರ ಸರಬರಾಜು ಸರಪಳಿ ಅಸಮರ್ಥವಾಗುತ್ತದಲಿದೆ. ಈ ನಿಟ್ಟಿನಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ರೈತ ಉತ್ಪಾದಕ ಸಂಸ್ಥೆಗಳ ರಚನೆ ಹಾಗೂ ಅಭಿವೃದ್ಧಿಯನ್ನು ಪ್ರೋತ್ಸಾಹಿಸುವ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿವೆ. ದೇಶದಲ್ಲಿ ಕಂಪನಿ ಕಾಯ್ದೆಗೆ ತಿದ್ದುಪಡಿ ತರುವ ಮೂಲಕ ರೈತ ಉತ್ಪಾದಕ ಸಂಸ್ಥೆಗಳನ್ನು ಈ ಕಾಯ್ದೆಯ ಅಡಿಯಲ್ಲಿ ನೋಂದಾಯಿಸುವ ಅವಕಾಶ ಕಲ್ಪಿಸಲಾಗಿದೆ. ಇದರಿಂದಾಗಿ ಕೃಷಿಯನ್ನು ಒಂದು ಉದ್ದಿಮೆ ರೂಪದಲ್ಲಿ ನೋಡುವಂತಹ ಚಿಂತನೆಗೆ ಚಾಲನೆ ನೀಡಿದಂತಾಗಿದೆ.ಈ ವರ್ಷದ ಕೇಂದ್ರ ಆಯವ್ಯಯದಲ್ಲಿ ಸುಮಾರು 10000 ರೈತ ಉತ್ಪಾದಕ ಸಂಸ್ಥೆಗಳನ್ನು ರಚಿಸಲು ಅವಶ್ಯಕ ತಂತ್ರವನ್ನು ರೂಪಿಸಲಾಗಿದೆ. ಕರ್ನಾಟಕ ರಾಜ್ಯದಲ್ಲಿಯೂ ಸಹ ರೈತ ಉತ್ಪಾದಕ ಸಂಸ್ಥೆಗಳ ಉತ್ತೇಜನ, ಅಭಿವೃದ್ಧಿ ಹಾಗೂ ಮೌಲ್ಯ ಸರಪಳಿಯಲ್ಲಿ ಅವುಗಳನ್ನು ವಿವಿಧ ಸಂಸ್ಥೆಗಳ ಜೊತೆಗೆ ಸಂಬಂಧ ಕಲ್ಪಿಸುವ ಮೂಲಕ ಅವುಗಳು ಸ್ವತಂತ್ರ ವ್ಯವಹಾರಿಕ ಸಂಸ್ಥೆಗಳಾಗಿ ಕಾರ್ಯನಿರ್ವಹಿಸುವ ನಿಟ್ಟಿನಲ್ಲಿ ಪೂರಕವಾಗುವಂತೆ ಕರ್ನಾಟಕ ರೈತ ಉತ್ಪಾದಕ ಸಂಸ್ಥೆಗಳ ನೀತಿ - 2018ನ್ನು ಜಾರಿಗೆ ತರಲಾಗಿದೆ. ರಾಜ್ಯದ ವಿವಿಧ ಅಭಿವೃದ್ಧಿ ಇಲಾಖೆಗಳು, ರೈತ ಉತ್ಪಾದಕ ಸಂಸ್ಥೆಗಳ ಸ್ಥಾಪನೆ ಹಾಗೂ ಅಭಿವೃದ್ಧಿಯ ಕಾರ್ಯಕ್ರಮವನ್ನು ಹಮ್ಮಿಕೊಂಡಿವೆ.

ಹೆಚ್ಚುತ್ತಿರುವ ರೈತ ಉತ್ಪಾದಕ ಸಂಸ್ಥೆಗಳ ಸಂಖ್ಯೆಗಳ ದೃಷ್ಟಿಯಿಂದ, ರೈತ ಉತ್ಪಾದಕ ಸಂಸ್ಥೆಗಳ ಸಾಮರ್ಥ್ಯವನ್ನು ಹೆಚ್ಚಿಸುವುದು ಅಗತ್ಯವಾಗಿರುತ್ತದೆ. ರೈತ ಉತ್ಪಾದಕ ಸಂಸ್ಥೆಗಳನ್ನು ಪ್ರೋತ್ಸಾಹಿಸಿದ ಹಲವಾರು ಸಂಸ್ಥೆಗಳಾದ (ನಬಾರ್ಡ್), ಎಸ್ ಎಫ್ ಎ ಸಿ , ರಾಜ್ಯ ಅಭಿವೃದ್ಧಿ ಇಲಾಖೆಗಳು ಮತ್ತು ಸರ್ಕಾರೇತರ ಸಂಸ್ಥೆಗಳು, ರೈತ ಉತ್ಪಾದಕ ಸಂಸ್ಥೆಗಳ ನಿರ್ದೇಶಕರ ಮಂಡಳಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ತಾಂತ್ರಿಕ ಸಿಬ್ಬಂದಿಗೆ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲು ರಾಜ್ಯದಲ್ಲಿ ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರವನ್ನು ಸ್ಥಾಪಿಸಲಾಗಿದೆ. ಈ ಕೇಂದ್ರದಿಂದ ವಿವಿಧ ತರಬೇತಿ ಕಾರ್ಯಕ್ರಮಗಳನ್ನು ನೀಡಲಾಗುತ್ತಿದ್ದರೂ, ರೈತ ಉತ್ಪಾದಕ ಸಂಸ್ಥೆಗಳ ಕಾರ್ಯಚಟುವಟಿಕೆಗಳಲ್ಲಿ ತೊಡಗಿಸಿಕೊಂಡ ವಿವಿಧ ಪಾಲುದಾರರಿಗೆ ಅದರಲ್ಲಿಯೂ ಮುಖ್ಯವಾಗಿ ಉತ್ಪಾದಕ ಸಂಸ್ಥೆಗಳ ಆಡಳಿತ ಮಂಡಳಿಯ ಸದಸ್ಯರಿಗೆ ಸರಳ ಮತ್ತು ಸ್ಪಷ್ಟವಾದ ವಿಷಯಗಳನ್ನು ಒಳಗೊಂಡಿರುವ ತರಬೇತಿ ಕೈಪಿಡಿಗಳ ತಯಾರಿಕೆಯ ಅಗತ್ಯವನ್ನು ಅರಿತುಕೊಂಡು, ಹಲವಾರು ತರಬೇತಿ ಕೈಪಿಡಿಗಳನ್ನು ಪ್ರಕಟಿಸುವ ಉತ್ಕೃಷ್ಟ ಕೇಂದ್ರದ ಪ್ರಯತ್ನ ಶ್ಲಾಘನೀಯ. ಈ ತರಬೇತಿ ಕೈಪಿಡಿ ಒಂದು ಉಪಯುಕ್ತ ಕೈಪಿಡಿಯಾಗಿ ಉಪಯೋಗವಾಗುವದೇಂಬುದು ನಮ್ಮ ಆಶಯ.

**ಕುಲಪತಿಗಳು**

**ತೋಟಗಾರಿಕೆ ವಿಶ್ವವಿದ್ಯಾಲಯ, ಬಾಗಲಕೋಟೆ**

# ರೈತ ಉತ್ಪಾದಕ ಸಂಸ್ಥೆಗಳ ಆಡಳಿತ ಮಂಡಳಿಯ ಸದಸ್ಯರಿಗೆ ಸ್ವಯಂ ಕಲಿಕಾ ಮಾಡ್ಯೂಲ್‌ನ ಉಪಯುಕ್ತತೆ.

ಭಾರತದ ಕೃಷಿ ಕ್ಷೇತ್ರದ ಸೂಕ್ಷ್ಮ ಅವಲೋಕನ ಮಾಡಿದಾಗ ಭಾರತೀಯ ಕೃಷಿಕರು ಎದುರಿಸುತ್ತಿರುವ ಹಲವಾರು ಸವಾಲುಗಳು ನಮಗೆ ಗೋಚರವಾಗುತ್ತವೆ. ಈ ಎಲ್ಲ ಸವಾಲುಗಳ ಮಧ್ಯೆಯು ಸ್ವತಂತ್ರ ನಂತರದ ವರ್ಷಗಳಲ್ಲಿ ಕೃಷಿ ಕ್ಷೇತ್ರದಲ್ಲಿ ಹಲವಾರು ಸಾಧನೆಗಳನ್ನು ಮಾಡಿದ ಶ್ರೇಯಸ್ಸು ಈ ದೇಶದ ರೈತ ಸಮುದಾಯಕ್ಕೆ ಸಲ್ಲುತ್ತದೆ. ಚೀನಾ ದೇಶವನ್ನು ಹೊರತುಪಡಿಸಿದರೆ ಅತೀ ಹೆಚ್ಚು ಸಂಖ್ಯೆಯಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರನ್ನು ಹೊಂದಿದ ನಮ್ಮ ದೇಶದಲ್ಲಿ ಅವರ ಕಲ್ಯಾಣಕ್ಕಾಗಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಇಂತಹ ಪ್ರಮುಖ ಕಾರ್ಯಕ್ರಮಗಳಲ್ಲಿ ರಾಷ್ಟ್ರಾದ್ಯಂತ ರೈತ ಉತ್ಪಾದಕ ಸಂಸ್ಥೆಗಳನ್ನು ಉತ್ತೇಜಿಸಿ ಬಲಪಡಿಸುವ ನಿಟ್ಟಿನಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಹಲವಾರು ಪ್ರಯತ್ನಗಳನ್ನು ಮಾಡುತ್ತಲಿವೆ. ಕೇಂದ್ರ ಸರ್ಕಾರವು 2020 ಆಯವ್ಯಯ ಘೋಷಣೆಯಲ್ಲಿ ರೈತ ಉತ್ಪಾದಕ ಸಂಸ್ಥೆಗಳ ಉತ್ತೇಜನಕ್ಕಾಗಿ ವಿಶೇಷ ತಂತ್ರವನ್ನು ಕೂಡ ಪ್ರಕಟಿಸಿದೆ. ಕರ್ನಾಟಕದಲ್ಲಿ ರಾಜ್ಯ ಸರ್ಕಾರವು ರೈತ ಉತ್ಪಾದಕ ಸಂಸ್ಥೆಗಳ ನೀತಿಯನ್ನು 2018 ರಲ್ಲಿಯೇ ಬಿಡುಗಡೆ ಮಾಡುವ ಮೂಲಕ ರಾಜ್ಯದಲ್ಲಿ ರೈತ ಉತ್ಪಾದಕ ಸಂಸ್ಥೆಗಳ ಸ್ಥಾಪನೆಗೆ ತನ್ನದೇ ಆದ ವಿಶೇಷ ಯೋಜನೆಯನ್ನು ಹಾಕಿಕೊಂಡಿದೆ. ರಾಜ್ಯದಲ್ಲಿ ರೈತ ಉತ್ಪಾದಕ ಸಂಸ್ಥೆಗಳ ಒಟ್ಟಾರೆ ಅಭಿವೃದ್ಧಿಗಾಗಿ ಮತ್ತು ಅದರಲ್ಲಿಯೂ ವಿಶೇಷವಾಗಿ ಈ ಸಂಸ್ಥೆಗಳ ವಿವಿಧ ಪದಾಧಿಕಾರಿಗಳಿಗೆ ತರಬೇತಿ ಮಾರ್ಗದರ್ಶನ ನೀಡಲು ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರವನ್ನು ಸ್ಥಾಪಿಸಿದೆ. ರಾಜ್ಯದಲ್ಲಿ ಸ್ಥಾಪಿತವಾದ ಹಲವಾರು ರೈತ ಉತ್ಪಾದಕ ಸಂಸ್ಥೆಗಳ ಪದಾಧಿಕಾರಿಗಳಿಗೆ, ರೈತ ಸದಸ್ಯರಿಗೆ ಹಾಗೂ ರೈತ ಉತ್ಪಾದಕ ಸಂಸ್ಥೆಗಳನ್ನು ಉತ್ತೇಜಿಸುವ ಅಭಿವೃದ್ಧಿ ಇಲಾಖೆಗಳ ವಿವಿಧ ಅಧಿಕಾರಿಗಳಿಗೆ ತರಬೇತಿ ಹಾಗೂ ಮಾರ್ಗದರ್ಶನವನ್ನು ಉತ್ಕೃಷ್ಟ ಕೇಂದ್ರದಿಂದ ನೀಡಲಾಗುತ್ತಿದೆ. ಈ ದಿಶೆಯಲ್ಲಿ ರೈತ ಉತ್ಪಾದಕ ಸಂಸ್ಥೆಗಳು ಆಡಳಿತ ಮಂಡಳಿಯ ನಿರ್ದೇಶಕರುಗಳಿಗೆ ಹಲವಾರು ವಿಷಯಗಳ ಬಗ್ಗೆ ತರಬೇತಿ ಕೈಪಿಡಿಗಳನ್ನು ವಿವಿಧ ಅನುಭವಿ ಸಂಸ್ಥೆಗಳ ಸಹಯೋಗದೊಂದಿಗೆ ಪ್ರಕಟಿಸುವ ಕಾರ್ಯವನ್ನು ಹಮ್ಮಿಕೊಳ್ಳಲಾಗಿದೆ. ತೆಲಂಗಾಣ ರಾಜ್ಯದ ಮಹಿಳಾ ಅಭಿವೃದ್ಧಿ ಸೊಸೈಟಿ ಮಧುಮೂರ್ತಿ ಹಾಗೂ ಶ್ರೀಮತಿ ರಾಮಲಕ್ಷ್ಮಿ ಅವರಿಂದ ತಯಾರಿಸಲಾದ ರೈತ ಉತ್ಪಾದಕ ಸಂಸ್ಥೆಗಳ ಸದಸ್ಯತ್ವ ಕುರಿತ ತರಬೇತಿ ಕೈಪಿಡಿಯ ಆಧಾರದ ಮೇಲೆ ಈ ಕಲಿಕಾ ಮಾಡ್ಯೂಲ್‌ನ್ನು ಪ್ರಕಟಿಸಲಾಗಿದೆ. ಕರ್ನಾಟಕ ರಾಜ್ಯದಲ್ಲಿ ಸ್ಥಾಪಿತವಾದ ಎಲ್ಲ ರೈತ ಉತ್ಪಾದಕ ಸಂಸ್ಥೆಗಳ ಆಡಳಿತ ಮಂಡಳಿಯ ನಿದೇಶಕರುಗಳು ಈ ಕಲಿಕಾ ಕೈಪಿಡಿಯ ಉಪಯೋಗವನ್ನು ಪಡೆಯುವರೆಂಬುದು ನಮ್ಮ ಆಶಯವಾಗಿದೆ. ಈ ಪ್ರಕಟಣೆಯನ್ನು ಹೊರತರುವಲ್ಲಿ ಸಹಭಾಗಿತ್ವ ನೀಡಿದ ಮಹಿಳಾ ಅಭಿವೃದ್ಧಿ ಸೊಸೈಟಿ, ಜಿ.ಐ.ಝಡ್ ಬೆಂಗಳೂರು, ಮೈರಾಡಾ, ಡಬ್ಲುಹೆಚ್‌ಹೆಚ್ ಡಿ.ಜಿ.ಆಪ್.ವಿ. ಹಾಗೂ ಸ್ಕಿಲ್ ಇಂಡಿಯಾ ಇವರಿಗೆ ವಿಶೇಷವಾದ ಕೃತಜ್ಞತೆಯನ್ನು ಸಲ್ಲಿಸುತ್ತಾ ಅವರ ಕೊಡುಗೆಯನ್ನು ಈ ಮೂಲಕ ದಾಖಲಿಸಲಿಚ್ಛಿಸುತ್ತೇನೆ.

**ನಿರ್ದೇಶಕರು**

**ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ**
**ಬೆಂಗಳೂರು**

# ಪರಿವಿಡಿ


| ಕ್ರ. ಸಂ. | ವಿವರ | ಪುಟ ಸಂಖ್ಯೆ |
|---|---|---|
| **I.** | ಕಲಿಕಾ ಕೈಪಿಡಿಯ ಕುರಿತು | |
| **II.** | ಸಂಕ್ಷೀಪ್ತಾಕ್ಷರಗಳು | |
| **III.** | ಮೂಲ ಸಮೀಕ್ಷೆ | |
| 1. | ರೈತ ಉತ್ಪಾದಕ ಸಂಸ್ಥೆಗಳಲ್ಲಿ ಸದಸ್ಯರ ಮಹತ್ವ | |
| 2. | ಸದಸ್ಯರ ಮಾಲಿಕತ್ವ ಮತ್ತು ನಿಯಂತ್ರಣ | |
| 3. | ಸದಸ್ಯತ್ವದ ಪ್ರಮುಖ ಲಕ್ಷಣಗಳು | |
| 4. | ರೈತ ಉತ್ಪಾದಕ ಸಂಸ್ಥೆಗಳಲ್ಲಿ ಸದಸ್ಯತ್ವ – ಯಾರು? ಮತ್ತು ಹೇಗೆ? | |
| 5. | ಬಂಡವಾಳ ಹೂಡಿಕೆ – ಸದಸ್ಯತ್ವವೇ ಮಾಲೀಕತ್ವ | |
| | **ಅನುಬಂಧ 1:** ಸಹಕಾರಿ ಸಂಘಗಳ ಕಾಯ್ದೆಯ ಪ್ರಕಾರ ಸದಸ್ಯತ್ವ ನಿಬಂಧನೆಗಳು | |
| | **ಅನುಬಂಧ 2:** ಕಂಪನಿ ಕಾಯಿದೆ 2013ರ ಪ್ರಕಾರ ಸದಸ್ಯತ್ವದ ನಿಬಂಧನೆಗಳು | |
| | ಅಂತಿಮ ಸಮೀಕ್ಷೆ | |

# ಅ. ಕಲಿಕಾ ಕೈಪಿಡಿಯ ಕುರಿತು

"ರೈತ ಉತ್ಪಾದಕ ಸಂಸ್ಥೆಗಳಲ್ಲಿ ಸದಸ್ಯತ್ವದ" ಕುರಿತ ಈ ಕಲಿಕಾ ಕೈಪಿಡಿಯು ರೈತ ಉತ್ಪಾದಕ ಸಂಸ್ಥೆಗಳ ಆಡಳಿತ ಮಂಡಳಿಯ ಸದಸ್ಯರ ಸ್ವಯಂ ಕಲಿಕಾ ಮಾಡ್ಯೂಲ್‌ಗಳಲ್ಲಿ ಒಂದಾಗಿದೆ. ರೈತ ಉತ್ಪಾದಕ ಸಂಸ್ಥೆಗಳಲ್ಲಿ ಸದಸ್ಯರೇ ಮಾಲಿಕರಾಗಿರುವುದರಿಂದ ಮತ್ತು ಅದರ ಸಂಪೂರ್ಣ ಉದ್ದೇಶವು ಕೂಡ ಸದಸ್ಯರಿಗೆ ಸೇವೆ ನೀಡುವುದಾಗಿರುವುದರಿಂದ, ಈ ಕೈಪಿಡಿಯು ಹೆಚ್ಚಿನ ಮಹತ್ವವನ್ನು ಪಡೆದುಕೊಳ್ಳುತ್ತದೆ.

## ಉದ್ದೇಶ

ರೈತ ಉತ್ಪಾದಕ ಸಂಸ್ಥೆಗಳ ನಿರ್ವಹಣೆ ಕುರಿತ ಈ ಕಲಿಕಾ ಕೈಪಿಡಿಯು ರೈತ ಉತ್ಪಾದಕ ಸಂಸ್ಥೆಗಳ ಆಡಳಿತ ಮಂಡಳಿಯ ಸದಸ್ಯರಿಗೆ ಅವಶ್ಯಕವಿರುವ ತಿಳುವಳಿಕೆ ಹಾಗೂ ದೃಷ್ಟಿಕೋನ ಬೆಳೆಸಿಕೊಳ್ಳುವಲ್ಲಿ ಸಹಕಾರಿಯಾಗುವುದಲ್ಲದೇ, ಅವರು ತಮ್ಮ ಪಾತ್ರವನ್ನು ಪರಿಣಾಮಕಾರಿಯಾಗಿ ವಹಿಸಲು ಮತ್ತು ತಮ್ಮ ರೈತ ಉತ್ಪಾದಕ ಸಂಸ್ಥೆಗಳನ್ನು ಸದೃಢ ಹಾಗೂ ಉತ್ಸಾಹಭರಿತವಾಗಿ ರೀತಿಯಲ್ಲಿ ಮುನ್ನಡೆಸುವಲ್ಲಿ ಹಾಗೂ ಸದಸ್ಯರ ರೈತರಿಗೆ ತಮ್ಮ ಲಾಭಾಂಶಗಳನ್ನು ಹಂಚುವಲ್ಲಿ ಸಹಕಾರಿಯಾಗುವುದು.

## ಉದ್ದೇಶಿತ ಗುಂಪು

ಈ ಕಲಿಕಾ ಮಾಡ್ಯೂಲ್ ರೈತ ಉತ್ಪಾದಕ ಸಂಸ್ಥೆಗಳ ಆಡಳಿತ ಮಂಡಳಿಯ ಸದಸ್ಯರನ್ನು ಗುರಿಯಾಗಿರಿಸಿಕೊಂಡು ಸಿದ್ಧಪಡಿಸಲಾಗಿದ್ದು, ಕನಿಷ್ಠ ಒಂದು ವರ್ಷದ ಅನುಭವವನ್ನು ರೈತ ಉತ್ಪಾದಕ ಸಂಸ್ಥೆಗಳ ನಿರ್ವಹಣೆಯಲ್ಲಿ ಹೊಂದಿದ ಸದಸ್ಯರಿಗಾಗಿ ರೂಪಿಸಲಾಗಿದೆ.

## ಕಲಿಕಾ ಉದ್ದೇಶಗಳು

ಈ ಕಲಿಕಾ ಮಾಡ್ಯೂಲ್ ರೈತ ಉತ್ಪಾದಕ ಸಂಸ್ಥೆಗಳ ನಿರ್ವಹಣೆಯ ಕುರಿತಾಗಿದ್ದು, ಈ ಕೆಳಕಂಡ ಪ್ರಮುಖ ಕಲಿಕಾ ಉದ್ದೇಶಗಳನ್ನು ಹೊಂದಿದೆ.

- ಸದಸ್ಯರ ಪ್ರಾಮುಖ್ಯತೆ, ಅವರ ಮಾಲಿಕತ್ವ ಮತ್ತು ನಿಯತ್ರಣದ ಬಗ್ಗೆ ಅರಿವು ಪಡೆಯುವದು.
- ರೈತ ಉತ್ಪಾದಕ ಸಂಸ್ಥೆಗಳಲ್ಲಿನ ಸದಸ್ಯತ್ವದ ವಿವಿಧ ಪ್ರಮುಖ ವೈಶಿಷ್ಟ್ಯಗಳ ಬಗ್ಗೆ ತಿಳಿದುಕೊಳ್ಳುವುದು.
- ಸದಸ್ಯರ ಮಾನದಂಡಗಳನ್ನು ಅರ್ಥಮಾಡಿಕೊಳ್ಳುವುದು ಮತ್ತು ಸದಸ್ಯರಿಂದ ಬಂಡವಾಳ ಹೂಡಿಕೆಯ ಅಗತ್ಯತೆ.

## ರಚನೆ ಹಾಗೂ ವಿಷಯಗಳು

ಈ ಕಲಿಕಾ ಮಾಡ್ಯೂಲ್ ರೈತ ಉತ್ಪಾದಕ ಸಂಸ್ಥೆಗಳ ಸಿಬ್ಬಂದಿ, ಅವರ ಅವಶ್ಯಕತೆಗಳು ಹಾಗೂ ಕಾರ್ಯಗಳ ಕುರಿತು ಪ್ರಾರಂಭವಾಗುವುದು.ನಂತರದಲ್ಲಿ ರೈತ ಉತ್ಪಾದಕ ಸಂಸ್ಥೆಗಳಿಗೆ ಅವಶ್ಯಕವಿರುವ ಸಂಬಂಧಗಳು, ರೈತ ಉತ್ಪಾದಕ ಸಂಸ್ಥೆಗಳ ನಿರ್ವಹಣೆ ಮೇಲ್ವಿಚಾರಣೆ ಹಾಗೂ ವರದಿಯ ಅವಶ್ಯಕತೆಗಳ ಕುರಿತು ತಿಳುವಳಿಕೆ ನೀಡುವುದು.ಇದಲ್ಲದೇ, ರೈತ ಉತ್ಪಾದಕ ಸಂಸ್ಥೆಗಳ ಪ್ರಮುಖ ಕಾರ್ಯವಾದ ಲೆಕ್ಕ ಪರಿಶೋಧನೆಯ ಕುರಿತು ಮಾಹಿತಿ ನೀಡುವುದಲ್ಲದೇ, ಅತ್ಯುತ್ತಮವಾಗಿ ಕಾರ್ಯನಿರ್ವಹಿಸುವ ರೈತ ಉತ್ಪಾದಕ ಸಂಸ್ಥೆಗಳ ಪ್ರಮುಖ ಲಕ್ಷಣಗಳ ಕುರಿತು ಹಲವಾರು ವಿಷಯಗಳನ್ನು ಇದು ಹೊಂದಿದೆ.

## ಉಪಯೋಗಿಸುವ ರೀತಿ

ರೈತ ಉತ್ಪಾದಕ ಸಂಸ್ಥೆಗಳ ಆಡಳಿತ ಮಂಡಳಿಯ ಸದಸ್ಯರು ತಮ್ಮಷ್ಟಕ್ಕೆ ತಾವೇ ಈ ಕಲಿಕಾ ಮಾಡ್ಯೂಲ್‌ಗಳನ್ನು ತಮ್ಮ ತಿಳುವಳಿಕೆ ಹಾಗೂ ಕಲಿಕೆಗಾಗಿ ಉಪಯೋಗಿಸಿಕೊಳ್ಳಬಹುದಾಗಿದೆ ಅಥವಾ ಈ ಕಲಿಕಾ ಮಾಡ್ಯೂಲ್‌ಗಳಿಂದ ವಿಷಯವನ್ನು ಅರಿತುಕೊಳ್ಳಲು ಬಾಹ್ಯ ಸಂಪನ್ಮೂಲ ವ್ಯಕ್ತಿಯ ಸಹಾಯವನ್ನು ಪಡೆಯಬಹುದಾಗಿದೆ. ಈ ಮಾಡ್ಯೂಲ್‌ದೊಂದಿಗೆ ಹಲವಾರು ಸಂಬಂಧಿತ ಭಿತ್ತಿಪತ್ರಗಳಿದ್ದು, ಆಡಳಿತ ಮಂಡಳಿಯ ಸದಸ್ಯರು ಅವುಗಳನ್ನು ರೈತ ಉತ್ಪಾದಕ ಸಂಸ್ಥೆಯ ಸೂಕ್ತ ಸ್ಥಳಗಳಲ್ಲಿ ಪ್ರದರ್ಶಿಸಿ ನಿರಂತರ ಕಲಿಕೆಗೆ ಉಪಯೋಗಿಸಿಕೊಳ್ಳಬಹುದಾಗಿದೆ.

ಈ ಕಲಿಕಾ ಮಾಡ್ಯೂಲ್‌ನಿಂದ ಪರಿಣಾಮಕಾರಿ ಹಾಗೂ ದಕ್ಷತೆಯಿಂದ ರೈತ ಉತ್ಪಾದಕ ಸಂಸ್ಥೆಗಳ ನಿರ್ವಹಣೆಯನ್ನು ನೀವು ಮಾಡುವಿರೆಂದು ಹಾಗೂ ಈ ಕಲಿಕಾ ಕೈಪಿಡಿಯನ್ನು ಆನಂದಿಸುವಿರೆಂದು ನಾವು ಬಯಸುತ್ತೇವೆ.

# ಬ. ಸಂಕ್ಷಿಪ್ತಾಕ್ಷರಗಳು

**ಸಂಸ್ಥೆಯ ನಿಯಮಾವಳಿಗಳು (ಎಒಎ)** : ಇದು ಸಹಕಾರಿ ಸಂಘಗಳಿಗೆ ಉಪ ನಿಯಮಗಳಿದ್ದಂತೆ ಉತ್ಪಾದಕರ ಕಂಪನಿಗಳಿಗೆ ಸಂಘದ ಪರಿಚ್ಛೇದಗಳಿರುತ್ತವೆ. ಸಂಘದ ಪರಿಚ್ಛೇದವು ಕಂಪನಿಯ ಕಾರ್ಯನಿರ್ವಹಣೆಯ ನಿಬಂಧನೆಗಳನ್ನು ಸೂಚಿಸುತ್ತದೆ ಮತ್ತು ಕಂಪನಿಯ ಉದ್ದೇಶವನ್ನು ಹಾಗು ಉದ್ದೇಶವನ್ನು ಸಾಧಿಸುವ ಮಾರ್ಗ ಮತ್ತು ವಿಧಾನಗಳನ್ನು ವ್ಯಾಖ್ಯಾನಿಸುತ್ತದೆ.

ಮಂಡಳಿಯು ಸಂಘದ ಪರಿಚ್ಛೇದಗಳನ್ನು ಸಿದ್ಧಪಡಿಸಬೇಕು ಮತ್ತು ಅದನ್ನು ಕಂಪನಿಗಳ ನೋಂದಣಾಧಿಕಾರಿಗಳಿಂದ ಅನುಮೋದನೆ ಪಡೆಯಬೇಕು. ಇದರ ಯಾವುದೇ ತಿದ್ದುಪಡಿಯನ್ನು ಸಾಮಾನ್ಯ ಸಭೆಯಲ್ಲೇ ಮಾಡಬೇಕು ಮತ್ತು ಅದಕ್ಕೆ ಕಂಪನಿಗಳ ನೋಂದಣಾಧಿಕಾರಿಗಳಿಂದ ಅನುಮೋದನೆ ಪಡೆಯಬೇಕು.

**ಸಕ್ರಿಯ ಸದಸ್ಯ** : ನೀತಿ ನಿಯಮಾವಳಿಗಳಿಗೆ ಬದ್ಧವಾಗಿರುವ ರೈತ ಉತ್ಪಾದಕ ಸಂಸ್ಥೆಯ ಸದಸ್ಯರ ಜವಾಬ್ದಾರಿಯ ಮಾನದಂಡಗಳನ್ನು ಪೂರೈಸುವ ವ್ಯಕ್ತಿ.

**ಉದಾ:** ಹಾಲು ಉತ್ಪಾದಕ ಸಂಸ್ಥೆಯ ನೀತಿನಿಯಮಗಳು, ಒಬ್ಬ ಸದಸ್ಯನು ವರ್ಷದಲ್ಲಿ 180 ದಿನಗಳ ಅವಧಿಯಲ್ಲಿ ಕನಿಷ್ಠ 180 ಲೀಟರ್ ಹಾಲನ್ನು ಪೂರೈಸಬೇಕು ಎಂದು ಷರತ್ತು ವಿಧಿಸಿದರೆ, ಈ ಅಗತ್ಯವನ್ನು ಪೂರೈಸುವ ಸದಸ್ಯರನ್ನು ಮಾತ್ರ ಸಕ್ರಿಯ ಸದಸ್ಯರೆಂದು ಪರಿಗಣಿಸಲಾಗುತ್ತದೆ.

**ಮಂಡಳಿ/ಮಂಡಳಿ ನಿರ್ದೇಶಕರು (ಬಿಒಡಿ)** : ಮಂಡಳಿಯು ರೈತ ಉತ್ಪಾದಕರ ಸಂಸ್ಥೆಗಳ ನೀತಿ ತೀರ್ಮಾನಗಳನ್ನು ತೆಗೆದುಕೊಳ್ಳುವ ಮತ್ತು ಇದು ತನ್ನ ಸದಸ್ಯರಿಗಾಗಿ ಕಾರ್ಯನಿರ್ವಹಿಸುತ್ತಿದೆ ಎಂಬುದನ್ನು ಖಾತ್ರಿಪಡಿಸುವ ಆಡಳಿತ ಮಂಡಳಿಯಾಗಿದೆ. ರೈತ ಉತ್ಪಾದಕ ಸಂಸ್ಥೆಗಳ ಮಂಡಳಿಯು ಸಾಮಾನ್ಯ ಸಭೆಯಿಂದ ಅಂದರೆ ರೈತ ಉತ್ಪಾದಕ ಸಂಸ್ಥೆಯ ಸದಸ್ಯರಿಂದ ಚುನಾಯಿತರಾದವರಿಂದ ಕೂಡಿರುತ್ತದೆ.

**ಉಪನಿಯಮಗಳು (ಬೈಲಾಗಳು)** : ಉಪನಿಯಮಗಳು ಸಹಕಾರಿ ಸೊಸೈಟಿಗಳು ಕಾರ್ಯನಿರ್ವಹಣೆಯನ್ನು ಸಕ್ರಿಯಗೊಳಿಸುವ ನಿಯಮಗಳ ಗುಂಪು. ಪ್ರತಿಯೊಂದು ಸಹಕಾರಿ ಸೊಸೈಟಿಗಳು ತಮ್ಮ ಸ್ವಂತ ಉಪನಿಯಮಗಳನ್ನು ಹೊಂದಿರುತ್ತವೆ ಮತ್ತು ಸಹಕಾರಿ ಸೊಸೈಟಿಗಳ ಎಲ್ಲಾ ಕಾರ್ಯಚಟುವಟಿಕೆಗಳನ್ನು ಈ ಉಪನಿಯಮಗಳ ಅಡಿಯಲ್ಲೇ ತೆಗೆದುಕೊಳ್ಳಲಾಗುತ್ತದೆ.

ಮಂಡಳಿಯು ತನ್ನ ಉಪನಿಯಮಗಳನ್ನು ರೂಪಿಸಿ ಅದಕ್ಕೆ ಸಹಕಾರಿ ನೋಂದಣಾಧಿಕಾರಿಗಳಿಂದ ಅನುಮೋದನೆ ಪಡೆಯಬೇಕು. ಇದರ ಯಾವುದೇ ತಿದ್ದುಪಡಿಯನ್ನು ಸಾಮಾನ್ಯ ಸಭೆಯಲ್ಲೇ ಮಾಡಬೇಕು ಮತ್ತು ಅದಕ್ಕೂ ಸಹ ಸಹಕಾರಿ ನೋಂದಣಾಧಿಕಾರಿಗಳಿಂದ ಅನುಮೋದನೆ ಪಡೆಯಬೇಕು.

| | | |
|---|---|---|
| **ಸಹಕಾರಿ ಸಂಘ** | : | ಸಹಕಾರಿ ಕಾಯ್ದೆಯಡಿ ನೋಂದಣಿಯಾದ ರೈತ ಉತ್ಪಾದಕ ಸಂಸ್ಥೆಗಳನ್ನು (ಉದಾ: ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959) ಸಹಕಾರಿ ಸಂಘಗಳೆಂದು ಕರೆಯುತ್ತಾರೆ. |
| **ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (ಸಿಇಒ)/ ಮ್ಯಾನೇಜರ್ / ಜನರಲ್ ಮ್ಯಾನೇಜರ್** | : | ಪ್ರತಿಯೊಂದು ರೈತ ಉತ್ಪಾದಕರ ಸಂಸ್ಥೆಗಳು ಪೂರ್ಣಾವಧಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳನ್ನು ಹೊಂದಿರಬೇಕು ಅಥವಾ ಯಾವುದೇ ಪದನಾಮದಲ್ಲಿ ಇರಬಹುದು (ಮ್ಯಾನೇಜರ್. ಜನರಲ್ ಮ್ಯಾನೇಜರ್ ಇತ್ಯಾದಿ). ಮುಖ್ಯ ನಿರ್ವಾಹಕ ಅಧಿಕಾರಿ ರೈತ ಉತ್ಪಾದಕರ ಸಂಸ್ಥೆಯ ಎಲ್ಲಾ ಚಟುವಟಿಕೆಗಳನ್ನು ಮಂಡಳಿಯ ನಿರ್ದೇಶನ ಮತ್ತು ನಿಯಂತ್ರಣದ ಅಡಿಯಲ್ಲಿ ನಿರ್ವಹಿಸಬೇಕು ಮತ್ತು ರೈತ ಉತ್ಪಾದಕರ ಸಂಸ್ಥೆಯ ಸಾಧನೆಗೆ ಉತ್ತರದಾಯಿತ್ವವನ್ನು ಹೊಂದಿರಬೇಕು. |
| **ಲಾಂಭಾಂಶ** | : | ಲಾಭಾಂಶವು ರೈತ ಉತ್ಪಾದಕ ಸಂಸ್ಥೆಗಳ ಗಳಿಕೆಯಿಂದಾದ ಒಂದು ಭಾಗ, ಅದನ್ನು ಸದಸ್ಯರಿಗೆ ವಿತರಣೆ ಮಾಡಬಹುದು. |
| **ರೈತ ಉತ್ಪಾದಕ ಸಂಸ್ಥೆ** | : | ರೈತ ಉತ್ಪಾದಕರ ಸಂಸ್ಥೆಯು ಅದರ ಕೃಷಿಕ ಸದಸ್ಯರ ಮಾಲಿಕತ್ವದ ಮತ್ತು ನಿಯಂತ್ರಣವನ್ನು ಹೊಂದಿದ ನೋಂದಾಯಿತಿ ಸಂಸ್ಥೆಯಾಗಿದೆ. ರೈತ ಉತ್ಪಾದಕರ ಸಂಸ್ಥೆಯ ಉದ್ದೇಶ ತನ್ನ ಸದಸ್ಯರ ಸಾಮಾನ್ಯ ಬೇಡಿಕೆಗಳನ್ನು ಹಾಗೂ ಅವರಿಗೆ ಅವಶ್ಯಕವಾಗಿರುವ ಸೇವೆಗಳನ್ನು ಒದಗಿಸುವುದಾಗಿದೆ. ರೈತ ಉತ್ಪಾದಕ ಸಂಸ್ಥೆಗಳು ಕೃಷಿ ಮತ್ತು ಅದಕ್ಕೆ ಸಂಬಂಧಪಟ್ಟ ವಿವಿಧ ಚಟುವಟಿಕೆಗಳಲ್ಲಿ ತೊಡಗಿಕೊಂಡಿರಬೇಕು. ರೈತ ಉತ್ಪಾದಕರ ಸಂಸ್ಥೆಗಳು ಔಪಚಾರಿಕ ಸಂಸ್ಥೆಗಳಾಗಿರುವುದರಿಂದ ಅವರು ಕಛೇರಿ/ಮೂಲ ಸೌಕರ್ಯ, ಸಿಬ್ಬಂದಿ, ವ್ಯವಸ್ಥೆ ಮತ್ತು ಅವುಗಳು ಮಂಡಳಿಯ ನಿರ್ದೇಶಕರ ನಿಯಂತ್ರಣಕ್ಕೆ ಒಳಪಟ್ಟಿರಬೇಕು. |
| **ವಿಶೇಷ/ಅಸಾಧಾರಣ ಸಾಮಾನ್ಯ ಸಭೆ (ಇಜಿಎಮ್)** | : | ವಿಶೇಷ ಸಾಮಾನ್ಯ ಸಭೆಯು ಸಂಸ್ಥೆಯ ಸಾಮಾನ್ಯ ಸಭೆಯ ಹೊರತಾಗಿಯೂ ವಿಶೇಷ ಸನ್ನಿವೇಶಗಳಲ್ಲಿ ನಡೆಸುವ ಒಂದು ಸಭೆ. ಈ ಸಭೆಯನ್ನು ಯಾವುದಾದರೊಂದು ನಿರ್ದಿಷ್ಟ ಅಥವಾ ತುರ್ತ ವಿಷಯಗಳ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದಕ್ಕಾಗಿ ವಾರ್ಷಿಕ ಸಾಮಾನ್ಯ ಸಭೆಯ ಹೊರತಾಗಿಯೂ ನಡೆಸುವ ಒಂದು ಸಭೆ. |
| **ಸಾಮಾನ್ಯ ಸಭೆ** | : | ರೈತ ಉತ್ಪಾದಕರ ಸಂಸ್ಥೆಯ ಎಲ್ಲಾ ಸದಸ್ಯರನ್ನು ಆ ರೈತ ಉತ್ಪಾದಕರ ಸಂಸ್ಥೆಯ ಸಾಮಾನ್ಯ ಸಭೆಯ ಸದಸ್ಯರೆಂದು ಪರಿಗಣಿಸಲಾಗುತ್ತದೆ. ಸಾಮಾನ್ಯ ಸಭೆಯು ರೈತ ಉತ್ಪಾದಕರ ಸಂಸ್ಥೆಯ ಅತ್ಯುನ್ನತ ಪ್ರಾಧಿಕಾರವಾಗಿರುತ್ತದೆ. |
| **ಸದಸ್ಯ ಕೇಂದ್ರಿಕೃತ** | : | ಸದಸ್ಯ ಕೇಂದ್ರಿಕೃತವು ರೈತ ಉತ್ಪಾದಕ ಸಂಸ್ಥೆಯ ಸದಸ್ಯರಿಗೆ ಅದರ ಸೇವೆಗಳು ಎಷ್ಟು ಮುಖ್ಯ ಎಚಿಬುದನ್ನು ಸೂಚಿಸುತ್ತದೆ. ಅಂದರೆ, ರೈತ ಉತ್ಪಾದಕ ಸಂಸ್ಥೆಗಳು ಸದಸ್ಯರ ಅಗತ್ಯಗಳಿಗೆ ಸ್ಪಂದಿಸುತ್ತಿದ್ದರೆ, ಸದಸ್ಯರು ರೈತ ಉತ್ಪಾದಕ ಸಂಸ್ಥೆಗಳು ತಮಗೆ ಮಹತ್ವದ್ದಾಗಿದೆ ಎಂದು ಭಾವಿಸುತ್ತಾರೆ. |

**ಸದಸ್ಯರು** : "ಸದಸ್ಯರು" ಎಂದರೆ ರೈತ ಉತ್ಪಾದಕ ಸಂಸ್ಥೆಗೆ ಸದಸ್ಯರಾಗಿ ದಾಖಲಾದ ವ್ಯಕ್ತಿ ಅಥವಾ ಉತ್ಪಾದಕ ಸಂಸ್ಥೆ ಮತ್ತು ಹಾಗೆ ಸದಸ್ಯರಾಗಿ ಮುಂದುವರೆಯಲು ತಮ್ಮ ಅರ್ಹತೆಯನ್ನು ಉಳಿಸಕೊಂಡವರು ಎಂದರ್ಥ. ರೈತ ಉತ್ಪಾದಕ ಸಂಸ್ಥೆಯಲ್ಲಿ ಅರ್ಹ ಕೃಷಿಕರು ಅಥವಾ ಉತ್ಪಾದಕ ಸಂಸ್ಥೆಗಳು ತಮ್ಮ ಕಾರ್ಯಕ್ಷೇತ್ರದಲ್ಲಿ (ಉಪನಿಯಮಗಳು/ಸಂಸ್ಥೆಯ ನಿಯಮಾವಳಿಗಳ ಪ್ರಕಾರ) ಸದಸ್ಯರಾಗಬಹುದು.

**ಸದಸ್ಯರ ಪ್ರೋತ್ಸಾಹ** : ರೈತ ಉತ್ಪಾದಕ ಸಂಸ್ಥೆ ತನ್ನ ಸದಸ್ಯರಿಗೆ ತನ್ನ ವ್ಯವಹಾರ ಚಟುವಟಿಕೆಗಳಲ್ಲಿ ಭಾಗವಹಿಸಿ ಸೇವೆಗಳನ್ನು ಉಪಯೋಗಿಸಿಕೊಳ್ಳುವದು

**ಉತ್ಪಾದಕರ ಕಂಪನಿ** : ಕಂಪನಿಗಳ ಕಾಯ್ದೆ 2013ರ ಅಡಿಯಲ್ಲಿ ನೋಂದಣಿಯಾದ ರೈತ ಉತ್ಪಾದಕರ ಸಂಸ್ಥೆಯನ್ನು ಉತ್ಪಾದಕ ಕಂಪನಿ ಎಂದು ಕರೆಯಲಾಗುತ್ತದೆ. ಉತ್ಪಾದಕ ಕಂಪನಿ ಎಂದರೆ ಸೆಕ್ಷನ್ 581ಬಿ ನಲ್ಲಿ ಸೂಚಿಸಿದ ವಿಚಾರಗಳು ಅಥವಾ ಚಟುವಟಿಕೆಗಳನ್ನು ಹೊಂದಿರುವುದು ಮತ್ತು ಕಂಪನಿಗಳ ಕಾಯ್ದೆ 2013ರ ಅಡಿಯಲ್ಲಿ ಉತ್ಪಾದಕರ ಕಂಪನಿ ಎಂದು ನೋಂದಾಯಿತವಾಗಿರುವುದು.

**ಪಾಲುದಾರರ ಭಾಗವಹಿಸುವಿಕೆಯನ್ನು ಖಾತ್ರಿಗೊಳಿಸುವ ವ್ಯವಸ್ಥೆ (ಪಿಜಿಎಸ್)** : ಪಾಲುದಾರರ ಭಾಗವಹಿಸುವಿಕೆಯ ಗುಣಮಟ್ಟವನ್ನು ಸ್ಥಳೀಯವಾಗಿ ಪ್ರಸ್ತುತವಾಗಿರುವಂತೆ ಖಾತ್ರಿಗೊಳಿಸುವ ವ್ಯವಸ್ಥೆಯಾಗಿದ್ದು, ಪಾಲುದಾರರ ಭಾಗವಹಿಸುವಿಕೆಗೆ ಒತ್ತುನೀಡುತ್ತದೆ.

**ಷೇರು ಬಂಡವಾಳ** : ರೈತ ಉತ್ಪಾದಕ ಸಂಸ್ಥೆಗಳಲ್ಲಿ ಮಾಲೀಕತ್ವವನ್ನು ಪಡೆದುಕೊಳ್ಳಲು ಷೇರುದಾರ ಸದಸ್ಯರು ಸಂಸ್ಥೆಯಲ್ಲಿ ಹೂಡಿಕೆ ಮಾಡುವ ಹಣ.

**ತಡೆಹಿಡಿಯಲಾದ ಬೆಲೆ** : ತಡೆಹಿಡಿಯಲಾದ ಬೆಲೆ ಎಂದರೆ ರೈತ ಉತ್ಪಾದಕ ಸಂಸ್ಥೆಗಳಿಗೆ ಯಾವುದೇ ಸದಸ್ಯರು ಪೂರೈಸುವ ಸರಕುಗಳಿಗೆ ಪಾವತಿಸಬೇಕಾದ ಒಂದು ಭಾಗ; ಮತ್ತು ನಂತರದ ದಿನಾಂಕದಂದು ಪಾವತಿಸಬೇಕಾದದ್ದನ್ನು ರೈತ ಉತ್ಪಾದಕ ಸಂಸ್ಥೆಗಳು ತಡೆಹಿಡಿಯಲಾದ ಮೊತ್ತ. ರೈತ ಉತ್ಪಾದಕ ಸಂಸ್ಥೆ ನೀಡುವ ಸೇವೆಗಳನ್ನು ಉಪಯೋಗಿಸಿಕೊಂಡು ಸದಸ್ಯರ ಸಂಸ್ಥೆಯ ವ್ಯವಹಾರ ಚಟುವಟಿಕೆಗಳಲ್ಲಿ ಭಾಗವಹಿಸುವ ಮುಖಾಂತರ ಸಂಸ್ಥೆಯ ಬೆಳವಣಿಗೆಗೆ ಪ್ರೋತ್ಸಾಹ ನೀಡುವುದು.

# ಕ. ಮೂಲ ಸಮೀಕ್ಷೆ

ಈ ಕಲಿಕಾ ಮಾಡ್ಯೂಲ್ ಮುಖ್ಯವಾಗಿ ರೈತ ಉತ್ಪಾದಕ ಸಂಸ್ಥೆಗಳಲ್ಲಿ ಸದಸ್ಯತ್ವದ ಕುರಿತಾಗಿದೆ.

ಈ ವಿಷಯಕ್ಕೆ ಸಂಬಂಧಿಸಿದಂತೆ ಕೆಲವೊಂದು ಮೂಲಭೂತ ಪ್ರಶ್ನೆಗಳನ್ನು ನಿಮಗಾಗಿ ಕೆಳಗೆ ಪಟ್ಟಿಮಾಡಲಾಗಿದೆ. ಈ ಕಲಿಕೆಯಲ್ಲಿ ಪಾಲ್ಗೊಳ್ಳುವ ಸದಸ್ಯರು ತಾವಾಗಿಯೇ ಪ್ರಶ್ನೆಗಳನ್ನು ಉತ್ತರಿಸುವ ಪ್ರಯತ್ನ ಮಾಡಬೇಕು. ಈ ಮೂಲ ಸಮೀಕ್ಷೆಗಳ ಉದ್ದೇಶವೆಂದರೆ, ಈ ಕೆಳಗೆ ನೀಡಲಾದ ಪ್ರಶ್ನೆಗಳ ಬಗ್ಗೆ ನಮಗಿರುವ ಪ್ರಸ್ತುತ ಜ್ಞಾನ ಹಾಗೂ ತಿಳುವಳಿಕೆಯನ್ನು ಕುರಿತು ಸಮೀಕ್ಷಿಸುವುದಲ್ಲದೇ, "ರೈತ ಉತ್ಪಾದಕ ಸಂಸ್ಥೆಗಳ ಸದಸ್ಯತ್ವ" ದ ಕುರಿತು ಹೆಚ್ಚಿನ ಕಲಿಕೆಯನ್ನು ಮಾಡುವುದಾಗಿದೆ.

ಪ್ರಶ್ನೆ 1 : ರೈತ ಉತ್ಪಾದಕ ಸಂಸ್ಥೆಗಳ ಮಾಲೀಕರು ಯಾರು?

------------------------------------------------------------

------------------------------------------------------------

------------------------------------------------------------

------------------------------------------------------------

ಪ್ರಶ್ನೆ 2 : ರೈತ ಉತ್ಪಾದಕ ಸಂಸ್ಥೆಗಳಲ್ಲಿ ಯಾರು ಸದಸ್ಯರಾಗಬಹುದು?

------------------------------------------------------------

------------------------------------------------------------

------------------------------------------------------------

------------------------------------------------------------

ಪ್ರಶ್ನೆ 3 : ಸದಸ್ಯರು ಮತ್ತು ರೈತ ಉತ್ಪಾದಕ ಸಂಸ್ಥೆಗಳ ನಡುವಿನ ವ್ಯವಹಾರಗಳು ಯಾವುವು?

------------------------------------------------------------

------------------------------------------------------------

------------------------------------------------------------

------------------------------------------------------------

# 1

# ರೈತ ಉತ್ಪಾದಕ ಸಂಸ್ಥೆಗಳಲ್ಲಿ ಸದಸ್ಯರ ಮಹತ್ವ

## ಅಧಿವೇಶನದ ಉದ್ದೇಶ:



**ರೈತ ಉತ್ಪಾದಕ ಸಂಸ್ಥೆ ಮತ್ತು ಸದಸ್ಯರಿಗಾಗಿ ಕೆಲಸಮಾಡುವ ಸದಸ್ಯರ ಪ್ರಾಮುಖ್ಯತೆಯ ಬಗ್ಗೆ ಅರಿವು ಪಡೆಯುವುದು.**

**ವಿಷಯಗಳು:**

1. ಸದಸ್ಯರ ಪ್ರಾಮುಖ್ಯತೆ
2. ರೈತ ಉತ್ಪಾದಕ ಸಂಸ್ಥೆಗಳ ಜೊತೆಗಿನ ಸದಸ್ಯರ ವ್ಯವಹಾರ

## ಪರಿಚಯ

"ರೈತ ಉತ್ಪಾದಕ ಸಂಸ್ಥೆಗಳ ಸಾಂಸ್ಥಿಕ ರಚನೆ ಮತ್ತು ವಿನ್ಯಾಸ" ದ ಹಿಂದಿನ ಮಾಡ್ಯೂಲ್‌ನಲ್ಲಿ, ಸದಸ್ಯರು, ನಿರ್ದೇಶಕರ ಮಂಡಳಿ ಮತ್ತು ಸಿಬ್ಬಂದಿ ರೈತ ಉತ್ಪಾದಕ ಸಂಸ್ಥೆಗಳ ಮೂರು ಪ್ರಮುಖ ಕಾರ್ಯಕಾರಿಣಿಗಳು ಎಂದು ನಾವು ಗಮನಿಸಿದ್ದೇವೆ. ಸದಸ್ಯರು ರೈತ ಉತ್ಪಾದಕ ಸಂಸ್ಥೆಯ ಆಧಾರಸ್ಥಂಭವೆಂದು ನಾವು ಮನಗಂಡಿದ್ದೇವೆ ಮತ್ತು ಸದಸ್ಯರ ಹಿತದೃಷ್ಟಿಯ ಸಲುವಾಗಿ ಸಿಬ್ಬಂದಿ ಕೆಲಸ ಮಾಡಬೇಕಾಗುತ್ತದೆ. ಆದ್ದರಿಂದ, ಈ ಮಾಡ್ಯೂಲ್ ರೈತ ಉತ್ಪಾದಕ ಸಂಸ್ಥೆಗಳ ಪ್ರಮುಖ ಆಧಾರಸ್ತಂಭಗಳಾದ "ಸದಸ್ಯ"ರ ಕುರಿತಾಗಿದೆ.

ಹೀಗಾಗಿ, ಈ ಮಾಡ್ಯೂಲ್‌ನಲ್ಲಿ, ಸದಸ್ಯರ ಪ್ರಾಮುಖ್ಯತೆ, ಅವರ ಮಾಲಿಕತ್ವ ಮತ್ತು ನಿಯಂತ್ರಣ, ರೈತ ಉತ್ಪಾದಕ ಸಂಸ್ಥೆಗಳಲ್ಲಿನ ಸದಸ್ಯತ್ವದ ಪ್ರಮುಖ ವೈಶಿಷ್ಟ್ಯಗಳು, ಅಂದರೆ ಸದಸ್ಯರನ್ನು ಒಟ್ಟುಗೂಡಿಸುವುದು, ಸದಸ್ಯ ಕೇಂದ್ರೀಕೃತ, ಸದಸ್ಯರ ಮತ್ತು ರೈತ ಉತ್ಪಾದಕ ಸಂಸ್ಥೆ ಲಾಭಗಳನ್ನು ಸಮತೋಲನಗೊಳಿಸುವುದು ಮತ್ತು ಸದಸ್ಯರ ನಡುವಿನ ಸಂಬಂಧಗಳು ಇತ್ಯಾದಿ., ಅಲ್ಲದೆ ಸದಸ್ಯರಿಗೆ ಹೆಚ್ಚಿನ ಹಣಕಾಸಿನ ಪ್ರತಿಫಲಗಳನ್ನು ನೀಡುವ ನಿಟ್ಟಿನಲ್ಲಿ ಸಹ ಚರ್ಚಿಸುತ್ತೇವೆ.

## ರೈತ ಉತ್ಪಾದಕ ಸಂಸ್ಥೆಗಳ ಸದಸ್ಯರು

ನಮ್ಮ ರೈತ ಉತ್ಪಾದಕರ ಸಂಸ್ಥೆಗಳ ವ್ಯವಹಾರದ ಬಗ್ಗೆ ತಿಳಿಯುವ ಮೋದಲು, ನಾವು ಯಾವ ರೀತಿಯ ವ್ಯವಹಾರವನ್ನು ಮಾಡುತ್ತೇವೆ ಮತ್ತು ಯಾರಿಗೆ ರೈತ ಉತ್ಪಾದಕ ಸಂಸ್ಥೆಗಳು ಕೆಲಸ ಮಾಡಬೇಕು ಮತ್ತು ಏಕೆ ಎಂದು ನಾವು ಅರ್ಥಮಾಡಿಕೊಳ್ಳಬೇಕು.

ರೈತ ಉತ್ಪಾದಕ ಸಂಸ್ಥೆಗಳ ಪ್ರಕಾರವು ಈ ಕೆಳಗಿನವುಗಳನ್ನು ಅವಲಂಬಿಸಿರುತ್ತದೆ

- ವ್ಯವಹಾರವನ್ನು ಯಾರು ಹೊಂದಿದ್ದಾರೆ?
- ವ್ಯವಹಾರವನ್ನು ಯಾರು ನಿಯಂತ್ರಿಸುತ್ತಾರೆ?
- ವ್ಯವಹಾರವನ್ನು ಯಾರು ಬಳಸಿಕೊಳ್ಳುತ್ತಾರೆ?
- ಯಾರು ಲಾಭವನ್ನು ಪಡೆಯುತ್ತಾರೆ?

**ಸದಸ್ಯರು**


- ರೈತ ಉತ್ಪಾದಕ ಸಂಸ್ಥೆಗಳ ಮಾಲೀಕರು
- ರೈತ ಉತ್ಪಾದಕ ಸಂಸ್ಥೆಗಳ ಸೇವೆಗಳನ್ನು ಬಳಸುವವರು
- ರೈತ ಉತ್ಪಾದಕ ಸಂಸ್ಥೆಗಳನ್ನು ನಿಯಂತ್ರಿಸುವವರು
- ರೈತ ಉತ್ಪಾದಕ ಸಂಸ್ಥೆಗಳ ಅಸ್ತಿತ್ವಕ್ಕೆ ಕಾರಣಕರ್ತರು


ಒಬ್ಬ ವ್ಯಕ್ತಿಯು ತನ್ನ ಸ್ವಂತದ ವ್ಯಾಪಾರದಲ್ಲಿ, ಒಬ್ಬ ವ್ಯಕ್ತಿಯು ಮಾಲಿಕತ್ವ, ನಿಯಂತ್ರಣ, ನಿರ್ವಹಣೆ ಆಧಾರದ ಮೇಲೆ ಲಾಭವನ್ನು ಪಡೆಯುತ್ತಾನೆ. ಆದರೆ ಪಾಲುದಾರಿಕೆಗಳಲ್ಲಿ ಇಬ್ಬರು ಅಥವಾ ಹೆಚ್ಚಿನ ಜನರು ಮಾಲಿಕತ್ವ, ವ್ಯಾಪಾರದ ನಿಯಂತ್ರಣ, ನಿರ್ವಹಣೆಯನ್ನು ಹೊಂದಿತ್ತಾರೆ. ವ್ಯಾಪಾರವು ಕಾನೂನು ಬದ್ಧ ರೀತಿಯನ್ನು ಹೊಂದಿದ್ದು ಅವರ ಹೂಡಿಕೆಯ ಆಧಾರದ ಮೇಲೆ ಗಂಡಾಂತರಗಳಲ್ಲಿ / ಅಪಾಯಗಳಲ್ಲಿ ಮತ್ತು ಲಾಭಗಳಲ್ಲಿ ಪಾಲುದಾರರಾಗಿರುತ್ತಾರೆ. ಅದೇ ರೀತಿ ನಮ್ಮ ರೈತ ಉತ್ಪಾದಕ ಸಂಸ್ಥೆಗಳು ಸಹ ಒಂದು ಪಾಲುದಾರಿಕೆಯ ವ್ಯವಹಾರವಾಗಿದೆ.


- ನಮ್ಮಲ್ಲಿ ಬಹು ಮಾಲಿಕತ್ವ ಇರುತ್ತದೆ.
- ನಮ್ಮ ಸದಸ್ಯರಿಗೆ ಅಗತ್ಯವಿರುವ ವಿವಿಧ ಸರಕು ಮತ್ತು ಸೇವೆಗಳನ್ನು ನಾವು ನೀಡುತ್ತೇವೆ.
- ನಮ್ಮ ಸದಸ್ಯರು ಹೂಡಿಕೆದಾರರಾಗಿರುತ್ತಾರೆ ಮತ್ತು ಎಲ್ಲದಕ್ಕಿಂತ ಮುಖ್ಯವಾಗಿ, ಸದಸ್ಯರು ರೈತ ಉತ್ಪಾದಕ ಸಂಸ್ಥೆಯ ಮಾಲೀಕರು ಮಾತ್ರವಲ್ಲದೆ ಸಂಸ್ಥೆಯ ಸೇವೆಗಳ ಬಳಕೆದಾರರೂ ಆಗಿರುತ್ತಾರೆ.

ಇದರರ್ಥ ನಮ್ಮ ಸದಸ್ಯರು ರೈತ ಉತ್ಪಾದಕ ಸಂಸ್ಥೆಗಳ ಅಸ್ತಿತ್ವಕ್ಕೆ ಅಡಿಪಾಯ ಮತ್ತು ಕಾರಣಿಕರ್ತರಾಗಿರುತ್ತಾರೆ. ಹೀಗಾಗಿ, ರೈತ ಉತ್ಪಾದಕ ಸಂಸ್ಥೆಗಳು ತಮ್ಮ ಸದಸ್ಯರ ಆರ್ಥಿಕ ಮತ್ತು ಸಾಮಾಜಿಕ ಸುಧಾರಣೆಗೆ ಕೆಲಸ ಮಾಡಲು ಬದ್ಧವಾಗಿವೆ.

**ನಾವು ಮಾಲೀಕರು, ನಾವು ಬಳಕೆದಾರು, ನಾವು ನಿಯಂತ್ರಕರು, ನಮ್ಮದೆ ಲಾಭ/ನಷ್ಟ**





**ಸದಸ್ಯರು ಯಾರು?**

"ಬೈಲಾಗಳ ಪ್ರಕಾರ, ರೈತ ಉತ್ಪಾದಕ ಸಂಸ್ಥೆಗಳ ಸೇವೆಗಳನ್ನು ಬಳಸಿಕೊಳ್ಳಲು ಬಯಸುವ ಯಾವುದೇ ವ್ಯಕ್ತಿಯು ಸದಸ್ಯತ್ವದ ಜವಾಬ್ದಾರಿಗಳನ್ನು ಸ್ವೀಕರಿಸಲು ಮತ್ತು ರೈತ ಉತ್ಪಾದಕ ಸಂಸ್ಥೆಯ ಬೈಲಾಗಳಲ್ಲಿ ನಿರ್ದಿಷ್ಟಪಡಿಸಿದಂತಹ ಇತರ ಷರತ್ತುಗಳನ್ನು ಪೂರೈಸಲು ಅವನ/ ಅವಳ ಇಚ್ಛೆಯನ್ನು ಹೊಂದಿರುವವರು".

## ಸದಸ್ಯರು ಮತ್ತು ರೈತ ಉತ್ಪಾದಕ ಸಂಸ್ಥೆಗಳ ನಡುವಿನ ವಹಿವಾಟು

ಸದಸ್ಯರು ಮತ್ತು ರೈತ ಉತ್ಪಾದಕ ಸಂಸ್ಥೆಗಳ ನಡುವಿನ ಸಂಬಂಧಗಳು ಮತ್ತು ವಹಿವಾಟುಗಳನ್ನು ಈ ಕೆಳಗೆ ಚಿತ್ರಿಸಲಾಗಿದೆ.

**ರೇಖಾಚಿತ್ರ: ಸದಸ್ಯರು ಮತ್ತು ರೈತ ಉತ್ಪಾದಕರ ಸಂಘಟನೆಯ ನಡುವಿನ ವಹಿವಾಟು**




ಮೇಲಿನ ರೇಖಾಚಿತ್ರದಲ್ಲಿ ಸೂಚಿಸಿದಂತೆ, ಸದಸ್ಯರು ಷೇರುಬಂಡವಾಳದಲ್ಲಿ ಹೂಡಿಕೆಯ ಮೂಲಕ ರೈತ ಉತ್ಪಾದಕ ಸಂಸ್ಥೆಗಳಲ್ಲಿ ಮಾಲೀಕರಾಗುತ್ತಾರೆ ಮತ್ತು ಅದು ಒದಗಿಸುವ ಸೇವೆಗಳನ್ನು ಸಹಬಯಸುತ್ತಾರೆ. ರೈತ ಉತ್ಪಾದಕ ಸಂಸ್ಥೆಗಳ ಉದ್ದೇಶವು ತಮ್ಮ ಸದಸ್ಯರಿಗೆ ಅಗತ್ಯವಾದ ಸೇವೆಗಳನ್ನು ಸಮಯೋಚಿತ ಮತ್ತು ವೆಚ್ಚದಾಯಕ ರೀತಿಯಲ್ಲಿ ನೀಡುವುದಾಗಿದೆ.

## ರೈತ ಉತ್ಪಾದಕರ ಸಂಘಟನೆಯ ವ್ಯವಹಾರ ಯಶಸ್ವಿಯಾಗುವಲ್ಲಿ ಸದಸ್ಯರ ಪ್ರಾಮುಖ್ಯತೆ

ಪ್ರಯಾಣಿಕರಿಲ್ಲದೆ ಆಟೋ ರಿಕ್ಷಾದ ವ್ಯಾಪಾರವು ನಡೆಯುತ್ತದೆಯೇ?

ಗ್ರಾಹಕರು ತರಕಾರಿಗಳನ್ನು ಖರೀದಿಸದೆ ತರಕಾರಿ ಅಂಗಡಿಯ ವ್ಯವಹಾರ ನಡೆಯುತ್ತದೆಯೇ?

ಇಂತಹ ಎಲ್ಲಾ ಸಂದರ್ಭಗಳಲ್ಲಿ ಉತ್ತರ "ಇಲ್ಲ" ಎಂಬುದು ಸ್ಪಷ್ಟವಾಗಿದೆ.

ಆದ್ದರಿಂದ ಸದಸ್ಯರು ಸ್ವತಃ ರೈತ ಉತ್ಪಾದಕ ಸಂಸ್ಥೆಗಯ ಗ್ರಾಹಕರಾಗಿರುವುದರಿಂದ ರೈತ ಉತ್ಪಾದಕ ಸಂಸ್ಥೆಯ ವ್ಯವಹಾರವು ಸದಸ್ಯರಿಲ್ಲದೆ ನಡೆಯಲು ಸಾಧ್ಯವಿಲ್ಲ.

ಉದಾಹರಣೆಗೆ, ಮುಂಬರುವ ಕೃಷಿ ಋತುವಿನಲ್ಲಿ ರೈತ ಉತ್ಪಾದಕ ಸಂಸ್ಥೆಯು ತಮ್ಮ ಸದಸ್ಯರಿಗೆ 10 ಕ್ವಿಂಟಾಲ್ ಬೀಜದ ಅವಶ್ಯಕತೆಯ ಅಂದಾಜು ಮಾಡುತ್ತದೆ. ಇದಕ್ಕಾಗಿ ರೈತ ಉತ್ಪಾದಕ ಸಂಸ್ಥೆಯು ಸಾಲವನ್ನು ತೆಗೆದುಕೊಳ್ಳುತ್ತದೆ ಮತ್ತು ತಮ್ಮ ಸದಸ್ಯರಿಗೆ ನೀಡಲು 10 ಕ್ವಿಂಟಾಲ್ ಬೀಜವನ್ನು ಸಂಗ್ರಹಿಸುತ್ತದೆ. ಆದರೆ ಸದಸ್ಯರು ಕೇವಲ 2 ಕ್ವಿಂಟಾಲ್ ಬೀಜವನ್ನು ಮಾತ್ರ ತೆಗೆದುಕೊಂಡರೆ ಏನಾಗುತ್ತದೆ?

ಆದ್ದರಿಂದ ಮಾಲೀಕತ್ವವಿಲ್ಲದೆ ಯಾವುದೇ ಸಂಸ್ಥೆ ಇರುವುದಿಲ್ಲ ಮತ್ತು ಗ್ರಾಹಕರು ಇಲ್ಲದೆ ಯಾವುದೇ ವ್ಯವಹಾರವಿಲ್ಲ. ಅಂದರೆ ಸದಸ್ಯರಿಲ್ಲದೆ, ರೈತ ಉತ್ಪಾದಕರ ಸಂಸ್ಥೆಗೆ ಯಾವುದೇ ವ್ಯವಹಾರ ಮತ್ತು ಸುಸ್ತಿರತೆ ಇರುವುದಿಲ್ಲ.

ಮತ್ತೊಂದು ವಿವರಣೆಯನ್ನು ಕೆಳಗೆ ನೀಡಲಾಗಿದೆ.

ಗ್ರಾಮೀಣ ರೈತ ಉತ್ಪಾದಕ ಸಂಸ್ಥೆಯು ಕರ್ನಾಟಕ ರಾಜ್ಯದ ಕಲಬುರಗಿ ಬ್ಲಾಕ್‌ನಲ್ಲಿ ಕಾರ್ಯನಿರ್ವಹಿಸುತ್ತಿದೆ. ಕಲಬುರಗಿಯಲ್ಲಿ ತೊಗರಬೇಳೆ ಪ್ರಮುಖ ಬೆಳೆಯಾಗಿದ್ದು, ಗ್ರಾಮೀಣ ರೈತ ಉತ್ಪಾದಕ ಸಂಸ್ಥೆಯು ತೊಗರಿಬೇಳೆ ದಾಲ್ ಗಿರಣಿಯನ್ನು ಸ್ಥಾಪಿಸಲು ಯೋಜಿಸಿದೆ. ಗಿರಣಿಯ ಸಾಮರ್ಥ್ಯ ಮತ್ತು ವ್ಯವಹಾರಕ್ಕಾಗಿ ಸದಸ್ಯರ ಸಂಖ್ಯೆಯನ್ನು ಕೆಳಗೆ ನೀಡಲಾಗಿದ.

| ಕ್ರ.ಸಂ. | ವಿವರಗಳು | ಸಂಖ್ಯೆ | ಸಂಖ್ಯೆ |
|---|---|---|---|
| **ಘಟಕದ ವಿವರ** | | | |
| 1 | ಗಿರಣಿಯ ವಾರ್ಷಿಕ ಒಟ್ಟು ಸಾಮರ್ಥ್ಯ | ಕ್ವಿಂಟಾಲ್ | 9,000 |
| **ಕಚ್ಚಾ ವಸ್ತುಗಳ ವಿವರಗಳು** | | | |
| 2 | ಪ್ರತಿ ಸದಸ್ಯರ ಸರಾಸರಿ ಭೂಹಿಡುವಳಿ | ಎಕರೆ | 2 |
| 3 | ಸರಾಸರಿ ಉತ್ಪಾದಕತೆ | ಕ್ವಿಂಟಾಲ್/ಎಕರೆ | 4 |
| 4 | ಪ್ರತಿ ಸದಸ್ಯರ ಒಟ್ಟು ಉತ್ಪಾದನೆ | ಕ್ವಿಂಟಾಲ್ | 8 |
| 5 | ಸದಸ್ಯರು ರೈತ ಉತ್ಪಾದಕ ಸಂಸ್ಥೆಗೆ ಒದಗಿಸುವ ಸರಕುಗಳ | ಶೇಕಡಾವಾರು | 75% |
| 6 | ಸದಸ್ಯರಿಂದ ಒದಗಿಸಲಾದ ಕಚ್ಚಾ ವಸ್ತುಗಳ ಪ್ರಮಾಣ | ಕ್ವಿಂಟಾಲ್ | 6 |
| 7 | ಗಿರಣಿಯ ಪೂರ್ಣ ಸಾಮರ್ಥ್ಯವನ್ನು ಉಪಯೋಗಿಸಿಕೊಳ್ಳಲು ಬೇಕಾದ ಸದಸ್ಯರು/ಸಂಖ್ಯೆ | ಸಂಖ್ಯೆ | 1,500 |

ಮೇಲಿನ ವಿವರಣೆಯಿಂದ, ರೈತ ಉತ್ಪಾದಕ ಸಂಸ್ಥೆಯು ದಾಲ್ ಗಿರಣಿಯನ್ನು ಲಾಭದಾಯಕವಾಗಿ ನಡೆಸಲು 1,500 ಸದಸ್ಯ ಅಗತ್ಯವಿದೆ ಎಂಬುದು ಸ್ಪಷ್ಟವಾಗಿದೆ.

ಈಗ ನಾವು ಗ್ರಾಮೀಣ ರೈತ ಉತ್ಪಾದಕ ಸಂಸ್ಥೆಯ ಕಾರ್ಯಸಾಧ್ಯತೆಗೆ ಸಂಬಂಧಿಸಿದಂತೆ ಕೆಳಗಿನ ಪ್ರಶ್ನೆಗಳ ಬಗ್ಗೆ ಯೋಚಿಸಬೇಕಾಗಿದೆ:

1,500 ಸದಸ್ಯರನ್ನು ರೈತ ಉತ್ಪಾದಕ ಸಂಸ್ಥೆಯು ಒಟ್ಟುಗೂಡಿಸದಿದ್ದರೆ ಮತ್ತು ಕೆಲವೇ ಸದಸ್ಯರು ಮಾತ್ರ ಅಗತ್ಯವಿರುವ ಕಚ್ಚಾ ವಸ್ತುಗಳನ್ನು ಪೂರೈಸಿದರೆ ಅದರ ಫಲಿತಾಂಶಗಳು ಏನಾಗುವುದು?

ಗಿರಣಿ ಸ್ಥಾಪನೆಯಾದ ಕೆಲವು ವರ್ಷಗಳ ನಂತರ 1,500 ಸದಸ್ಯರನ್ನು ಒಟ್ಟುಗೂಡಿಸಿದರೆ ಅದರ ಫಲಿತಾಂಶಗಳು ಏನಾಗುತ್ತವೆ?

ಮೇಲಿನ ವಿವರಣೆಯಿಂದ, ರೈತ ಉತ್ಪಾದಕ ಸಂಸ್ಥೆಯ ವ್ಯವಹಾರದಲ್ಲಿ ಕಾರ್ಯಸಾಧ್ಯತೆಗೆ ರೈತ ಉತ್ಪಾದಕ ಸಂಸ್ಥೆಯಲ್ಲಿ ಸಾಕಷ್ಟು ಸದಸ್ಯತ್ವ ಮತ್ತು ಸದಸ್ಯರ ಅವರ ಸಂಪೂರ್ಣ ಪ್ರೋತ್ಸಾಹವು ನಿರ್ಣಾಯಕವಾಗಿದೆ ಎಂಬುದು ಸ್ಪಷ್ಟವಾಗಿದೆ. ರೈತ ಉತ್ಪಾದಕ ಸಂಸ್ಥೆಗಳ ಯಾವುದೇ ವ್ಯವಹಾರದ ಕಾರ್ಯಸಾಧ್ಯತೆಗಾಗಿ ಸಂಸ್ಕರಣಾ ಘಟಕ ಮತ್ತು ಸದಸ್ಯತ್ವದ ಸಂಪೂರ್ಣ ಸಾಮರ್ಥ್ಯದ ಬಳಕೆ ಅಗತ್ಯವಾಗಿರುತ್ತದೆ ಮತ್ತು ಇದಕ್ಕಾಗಿ ಬೇಕಾದ ಸದಸ್ಯರನ್ನು ಸಜ್ಜುಗೊಳಿಸಬೇಕು.

# 2

# ಸದಸ್ಯರ ಮಾಲೀಕತ್ವ ಮತ್ತು ನಿಯಂತ್ರಣ

**ಅಧಿವೇಶನದ ಉದ್ದೇಶ:**



**ಪ್ರಮುಖ ವಿಷಯಗಳು:**

1. ಸದಸ್ಯರ ಮಾಲೀಕತ್ವ ಮತ್ತು ನಿಯಂತ್ರಣದ ಅವಶ್ಯಕತೆಗಳ ಬಗ್ಗೆ ಅರಿವು ಮೂಡಿಸುವುದು.
2. ಸದಸ್ಯರ ಜವಾಬ್ದಾರಿಗಳ ಬಗ್ಗೆ ತಿಳಿಸುವುದು.


ಹಿಂದಿನ ಅಧಿವೇಶನದಲ್ಲಿ ರೈತ ಉತ್ಪಾದಕ ಸಂಸ್ಥೆ ಮತ್ತು ಸದಸ್ಯರ ಅರ್ಥದಿಂದ, ರೈತ ಉತ್ಪಾದಕ ಸಂಸ್ಥೆಗಳು ತಮ್ಮ ಸದಸ್ಯರ ಒಡೆತನದ ಮತ್ತು ನಿಯಂತ್ರಿಸುವ ಸದಸ್ಯ ಆಧಾರಿತ ಸಂಸ್ಥೆಗಳೆಂದು ತಿಳಿಯಬಹುದಾಗಿದೆ. ಈಗ, ಸದಸ್ಯರು ರೈತ ಉತ್ಪಾದಕ ಸಂಸ್ಥೆಗಳ ಮಾಲೀಕತ್ವವನ್ನು ಹೇಗೆ ಪಡೆಯುವುದು ಮತ್ತು ಅದನ್ನು ಹೇಗೆ ನಿಯಂತ್ರಿಸಬಹುದು ಎಂಬುದನ್ನು ನೋಡೋಣ.

ಸದಸ್ಯರು ರೈತ ಉತ್ಪಾದಕ ಸಂಸ್ಥೆಯ ಮಾಲೀಕತ್ವ ಮತ್ತು ನಿಯಂತ್ರಣವನ್ನು ಹೊಂದುವ ವಿಧಾನಗಳು ಈ ಕೆಳಗಿನಂತಿವೆ.

**ಸದಸ್ಯರು ಈ ಕೆಳಗಿನಂತೆ ಮಾಲೀಕತ್ವವನ್ನು ಚಲಾಯಿಸುತ್ತಾರೆ**




ಷೇರು ಬಂಡವಾಳವನ್ನು ಪಾವತಿಸುವುದು




ರೈತ ಉತ್ಪಾದಕ ಸಂಸ್ಥೆಯ ಬಂಡವಾಳಕ್ಕೆ ಕೊಡುಗೆ



ರೈತ ಉತ್ಪಾದಕ ಸಂಸ್ಥೆಯ ಸೇವೆಗಳನ್ನು ಬಳಸುವುದು


**ಸದಸ್ಯರು ಈ ಕೆಳಗಿನಂತೆ ರೈತ ಉತ್ಪಾದಕ ಸಂಸ್ಥೆಯ ಮೇಲೆ ನಿಯಂತ್ರಣವನ್ನು ಸಾದಿಸುತ್ತಾರೆ**



ನಿರ್ದೇಶಕರ ಮಂಡಳಿಯನ್ನು ಆಯ್ಕೆ ಮಾಡುವುದು



ಸಭೆಗಳಲ್ಲಿ ಮತದಾನ ಮಾಡುವುದು



ಪ್ರಮುಖ ವಿಷಯಗಳ ಬಗ್ಗೆ ನಿರ್ಧಾರ ತೆಗೆದುಕೊಳ್ಳುವುದು.

**ಸದಸ್ಯರು ತಮ್ಮ ಮಾಲಿಕತ್ವದ ಹಕ್ಕು ಚಲಾಯಿಸುವುದು**

- ಷೇರು ಬಂಡವಾಳವನ್ನು ಪಾವತಿಸುವುದು
- ರೈತ ಉತ್ಪಾದಕ ಸಂಸ್ಥೆಯ ಬಂಡವಾಳಕ್ಕೆ ಕೊಡುಗೆ
- ರೈತ ಉತ್ಪಾದಕ ಸಂಸ್ಥೆಯ ಸೇವೆಗಳನ್ನು ಬಳಸುವುದು

**ಸದಸ್ಯರು ರೈತ ಉತ್ಪಾದಕ ಸಂಸ್ಥೆಯ ಮೇಲೆ ನಿಯಂತ್ರಣವನ್ನು ಸಾದಿಸುವುದು**

- ಸಭೆಗಳಲ್ಲಿ ಮತದಾನ ಮಾಡುವುದು
- ನಿರ್ದೇಶಕರ ಮಂಡಳಿಯ ಆಯ್ಕೆ
- ಪ್ರಮುಖ ವಿಷಯಗಳ ಬಗ್ಗೆ ನಿರ್ಧಾರ ತೆಗೆದುಕೊಳ್ಳುವುದು

## ಚಟುವಟಿಕೆ:

ಎರಡು ರೈತ ಉತ್ಪಾದಕ ಸಂಸ್ಥೆಗಳ ಕೆಳಗಿನ ಪ್ರಕರಣಗಳನ್ನು ನೋಡೋಣ ಮತ್ತು ಈ ರೈತ ಉತ್ಪಾದಕ ಸಂಸ್ಥೆಗಳ ಯಶಸ್ವಿ ಕಾರ್ಯನಿರ್ವಹಣೆಯ ಬಗ್ಗೆ ಚರ್ಚಿಸೋಣ.

ರೈತ ಉತ್ಪಾದಕ ಸಂಸ್ಥೆ 1: ಈ ರೈತ ಉತ್ಪಾದಕರ ಸಂಸ್ಥೆಯ ಕಾರ್ಯಾಚರಣೆಯ ಪ್ರದೇಶದ ಎಲ್ಲ ಸಂಭಾವ್ಯ ಸದಸ್ಯರು ಪೂರ್ಣ ಅಧಿಕೃತ ಷೇರು ಬಂಡವಾಳವನ್ನು ಪಾವತಿಸುವ ಮೂಲಕ ರೈತ ಉತ್ಪಾದಕ ಸಂಸ್ಥೆಯ ಸದಸ್ಯರಾಗುತ್ತರೆ (ನಿಯಮಾವಳಿಗಳಲ್ಲಿ ತಿಳಿಸಿದಂತೆ ಮತ್ತು ರಿಜಿಸ್ಟಾರ್ ಅನುಮೋದಿಸಿದಂತೆ). ಸದಸ್ಯರು ಸಹ ರೈತ ಉತ್ಪಾದಕ ಸಂಸ್ಥೆಯ ಜೊತೆ ನಿಯಮಿತವಾಗಿ ಮಾಸಿಕ ಉಳಿತಾಯವನ್ನು ಮಾಡುತ್ತಾರೆ. ಸದಸ್ಯರ ಉತ್ಪನ್ನಗಳನ್ನು ರೈತ ಉತ್ಪಾದಕ ಸಂಸ್ಥೆಯು ಖರೀದಿಸುವ ಸಮಯದಲ್ಲಿ, ರೈತ ಉತ್ಪಾದಕ ಸಂಸ್ಥೆಯು ಸಹ ಸದಸ್ಯರಿಗೆ ಶೇಕಡಾ 10 ರಷ್ಟು ಬೆಲೆಯನ್ನು ಕಡಿತಗೊಳಿಸುತ್ತದೆ, ಅದನ್ನು ವ್ಯವಹಾರ ಚಕ್ರವನ್ನು ಪೂರ್ಣಗೊಳಿಸಿದ ನಂತರ, ವ್ಯವಹಾರ ಮಾಡುವ ಎಲ್ಲಾ ವೆಚ್ಚಗಳಿಗೆ ಹೊಂದಾಣಿಕೆ ಮಾಡಿದ ನಂತರ ಸದಸ್ಯರಿಗೆ ಹಿಂದಿರುಗಿಸಲಾಗುತ್ತದೆ.

ರೈತ ಉತ್ಪಾದಕ ಸಂಸ್ಥೆ 2: ಈ ರೈತ ಉತ್ಪಾದಕ ಸಂಸ್ಥೆಯಲ್ಲಿ, ಕೆಲವೇ ಕೆಲವು ರೈತರು ಮಾತ್ರ ರೈತ ಉತ್ಪಾದಕ ಸಂಸ್ಥೆಗೆ ಸೇರಿದ್ದರು ಮತ್ತು ಸದಸ್ಯರು ಅಧಿಕೃತ ಷೇರು ಬಂಡವಾಳದ ಸ್ವಲ್ಪ ಭಾಗವನ್ನು ಮಾತ್ರ ಸಂಸ್ಥೆಗೆ ನೀಡಿದರು. ಸದಸ್ಯರ ಉಳಿತಾಯ ಮತ್ತು ರೈತ ಉತ್ಪಾದಕ ಸಂಸ್ಥೆಯಲ್ಲಿ ಬೆಲೆ ತಡೆಹಿಡಿಯುವಿಕೆಯ ವ್ಯವಸ್ಥೆ ಇರುವುದಿಲ್ಲ.


ಕಳಗೆ ಸೂಚಿಸಿದ ಜಾಗವನ್ನು ಬಳಸಿಕೊಂಡು, ಮೇಲಿನ ಎರಡು ರೈತ ಉತ್ಪಾದಕ ಸಂಸ್ಥೆಗಳಲ್ಲಿ ಸದಸ್ಯರ ಮಾಲೀಕತ್ವ ಮತ್ತು ನಿಯಂತ್ರಣವು ಎಷ್ಟರ ಮಟ್ಟಿಗೆ ಅನುಸರಿಸುತ್ತಿವೆ ಎಂಬುದನ್ನು ಬರೆಯಿರಿ.

| ರೈತ ಉತ್ಪಾದಕ ಸಂಸ್ಥೆ 1 | ರೈತ ಉತ್ಪಾದಕ ಸಂಸ್ಥೆ 2 |
|---|---|
| | |


## ಸದಸ್ಯರ ಜವಾಬ್ದಾರಿಗಳು

ರೈತ ಉತ್ಪಾದಕ ಸಂಸ್ಥೆಗಳಲ್ಲಿ, ಕೇವಲ ಸದಸ್ಯರಿಗೆ ಮಾತ್ರ ಹಕ್ಕುಗಳಿವೆ, ಆದರೆ ಅವರು ಕೆಲವು ಜವಾಬ್ದಾರಿಗಳನ್ನು ಪೂರೈಸಬೇಕಾಗುತ್ತದೆ. ಸದಸ್ಯರ ಜವಾಬ್ದಾರಿಗಳನ್ನು ಈ ಕೆಳಗೆ ಚಿತ್ರಿಸಲಾಗಿದೆ.


| ಬದ್ಧತೆ ಮತ್ತು ಬಳಕೆ | ಮಾಲೀಕತ್ವ ಮತ್ತು ನಿಯಂತ್ರಣ | ಹಣಕಾಸು |
|---|---|---|
| • ಸೇವೆಗಳಿಗೆ ಬದ್ಧತೆ<br>• ಸೇವೆಗಳ ನಿಜವಾದ ಬಳಕೆ | • ಪ್ರಮುಖ ನಿರ್ಧಾರಗಳ ಮೇಲೆ ಮತ ಚಲಾಯಿಸುವುದು<br>• ನಿರ್ದೇಶಕರನ್ನು ನಾಮನಿರ್ದೇಶನ ಮಾಡುವುದು ಮತ್ತು ಆಯ್ಕೆ ಮಾಡುವುದು<br>• ಪ್ರಮುಖ ನಿರ್ಧಾರಗಳಲ್ಲಿ ಭಾಗವಹಿಸುವುದು | • ಷೇರು ಬಂಡವಾಳ<br>• ಉಳಿತಾಯ<br>• ಬಂಡವಾಳ |





ಮೇಲೆ ಚಿತ್ರಿಸಿದಂತೆ, ಸದಸ್ಯರು ಬದ್ಧತೆ ಮಾತ್ರವಲ್ಲದೆ (ಉದಹರಣೆಗಾಗಿ, ಮುಂಬರುವ ಕೃಷಿ ಋತುವಿನಲ್ಲಿ 10 ಕ್ವಿಂಟಾಲ್ ಬೀಜದ ಬೇಡಿಕೆಯನ್ನು ನೀಡುವುದು). ಸದಸ್ಯರು ಸಾಮಾನ್ಯ ಸಭೆಗಳಿಗೆ ಹಾಜರಾಗಬೇಕು ಮತ್ತು ನಿರ್ಧಾರ ತೆಗೆದುಕೊಳ್ಳುವಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು (ಉದಹರಣೆಗಾಗಿ ಯಾವ ಲೆಕ್ಕಪರಿಶೋಧಕರನ್ನು ನೇಮಿಸಬೇಕೆಂಬುದು). ಸದಸ್ಯರು ರೈತ ಉತ್ಪಾದಕ ಸಂಸ್ಥೆಯ ಹಣಕಾಸಿಗೆ ವಿವಿಧ ರೂಪಗಳಲ್ಲಿ ಕೊಡುಗೆ ನೀಡುವುದು ಸಹ ಬಹಳ ಮುಖ್ಯವಾಗಿದೆ.



## ಚಟುವಟಿಕೆ 1: ಆನೇಕಲ್ ರೈತ ಉತ್ಪಾದಕರ ಸಂಸ್ಥೆ

ವಿವಿಧ ಸೇವೆಗಳನ್ನು ಬಳಸಲು ಷೇರು ಬಂಡವಾಳವನ್ನು ನೀಡುವ ಮೂಲಕ ಆನೇಕಲ್ ರೈತ ಉತ್ಪಾದಕ ಸಂಸ್ಥೆಯಲ್ಲಿ ರಾಮು ಮತ್ತು ಶ್ಯಾಮು ಸದಸ್ಯರಾಗಿದ್ದರು. ರಾಮು ರೈತ ಉತ್ಪಾದಕ ಸಂಸ್ಥೆಯಿಂದ ಅಗತ್ಯವಾದ ಪ್ರಮಾಣದ ಬೀಜಗಳು ಮತ್ತು ರಸಗೊಬ್ಬರಗಳನ್ನು ತೆಗೆದುಕೊಂಡು ರೈತ ಉತ್ಪಾದಕ ಸಂಸ್ಥೆಗೆ 25 ಕ್ವಿಂಟಾಲ್ ತರಕಾರಿಗಳನ್ನು ಪೂರೈಸಿದನು. ಅವನು ರೈತ ಉತ್ಪಾದಕ ಸಂಸ್ಥೆಯಿಂದ ಕ್ರೆಡಿಟ್ ಮತ್ತು ವಿಮೆಯನ್ನು ಸಹ ಪಡೆದನು. ಅದೇರೀತಿ ಶ್ಯಾಮು ರೈತ ಉತ್ಪಾದಕ ಸಂಸ್ಥೆಗೆ 50 ಕ್ವಿಂಟಾಲ್ ತರಕಾರಿಗಳನ್ನು ಸರಬರಾಜು ಮಾಡಿದರೂ ಇತರ ಸೇವೆಗಳನ್ನು ಬಳಸಿಕೊಳ್ಳಲಿಲ್ಲ. ಇಬ್ಬರೂ ವಾರ್ಷಿಕ ಸಾಮಾನ್ಯ ಮಂಡಳಿಯ ಸಭೆಯಲ್ಲಿ ಪಾಲ್ಗೊಳ್ಳುತ್ತಾರೆ ಮತ್ತು ಮತದಾನ ಮತ್ತು ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾರೆ. ಅವರು ರೈತ ಉತ್ಪಾದಕ ಸಂಸ್ಥೆಂಯ ವಾರ್ಷಿಕ ವರದಿಯನ್ನು ಸಹ ಸ್ವೀಕರಿಸುತ್ತಾರೆ. ಅದೇ ರೈತ ಉತ್ಪಾದಕ ಸಂಸ್ಥೆಯಲ್ಲಿ, ಶಾಂತಾ 25 ಕ್ವಿಂಟಾಲ್ ತರಕಾರಿಗಳನ್ನು ಪೂರೈಸುತ್ತಾಳೆ ಮತ್ತು ಇತರ ಎಲ್ಲ ಸೇವೆಗಳನ್ನು ಸಹ ಪಡೆಯುತ್ತಾಳೆ. ಆದರೆ, ಅವಳು ಎಂದಿಗೂ ವಾರ್ಷಿಕ ಸಾಮಾನ್ಯ ಮಂಡಳಿಯ ಸಭೆಗೆ ಹಾಜರಾಗುವುದಿಲ್ಲ. ಅಂತೆಯೇ, ಬಾಲಯ್ಯ ಷೇರು ಬಂಡವಾಳವನ್ನು ಪಾವತಿಸುವ ಮೂಲಕ ಸದಸ್ಯತ್ವವನ್ನು ಪಡೆದಿದ್ದಾನೆ. ಆದರೆ ಅವನು ಎಂದಿಗೂ ರೈತ ಉತ್ಪಾದಕ ಸಂಸ್ಥೆಯ ಯಾವುದೇ ಸೇವೆಗಳನ್ನು ಬಳಸಿಕೊಂಡಿಲ್ಲ ಮತ್ತು ವಾರ್ಷಿಕ ಸಾಮಾನ್ಯ ಮಂಡಳಿಯ ಸಭೆಯಲ್ಲಿ ಭಾಗವಹಿಸಲಿಲ್ಲ.

ವಾರ್ಷಿಕ ಸಾಮಾನ್ಯ ಮಂಡಳಿಯ ಸಭೆ ನಡೆಸುವ ಮೊದಲು, ಸಭೆಯಲ್ಲಿ ಭಾಗವಹಿಸಲು ಮತ್ತು ಮತ ಚಲಾಯಿಸಲು ಅನರ್ಹ ಸದಸ್ಯರ ಪಟ್ಟಿಯನ್ನು ರೈತ ಉತ್ಪಾದಕ ಸಂಸ್ಥೆಯು ಸಿದ್ಧಪಡಿಸಿದೆ. ಪಟ್ಟಿಯಲ್ಲಿ, ಶ್ರೀ ಬಾಲಯ್ಯ ಮತ್ತು ಇತರ ಕೆಲವು ಸದಸ್ಯರ ಹೆಸರುಗಳು ಕಾಣಿಸಿಕೊಂಡವು. ಅನರ್ಹತೆಗೆ ಕಾರಣಗಳನ್ನು ಈ ಕೆಳಗಿನಂತೆ ಉಲ್ಲೇಖಿಸಲಾಗಿದೆ:

1.ಸದಸ್ಯರು ರೈತ ಉತ್ಪಾದಕ ಸಂಸ್ಥೆಯ ಸೇವೆಗಳನ್ನು ಬಳಸಿಕೊಂಡಿಲ್ಲ.

2.ಸದಸ್ಯರು ರೈತ ಉತ್ಪಾದಕ ಸಂಸ್ಥೆಯ ಚಟುವಟಿಕೆಗಳಲ್ಲಿ ಭಾಗವಹಿಸಿಲ್ಲ.

3.ಸದಸ್ಯರು ಎರಡು ವರ್ಷಗಳವರೆಗೆ ವಾರ್ಷಿಕ ಸಾಮಾನ್ಯ ಸಭೆಗಳಲ್ಲಿ ಭಾಗವಹಿಸಿಲ್ಲ.

ಇತ್ತೀಚಿನ ವಾರ್ಷಿಕ ಸಾಮಾನ್ಯ ಮಂಡಳಿಯ ಸಭೆಯಲ್ಲಿ, ರಾಮು ಮತ್ತು ಶ್ಯಾಮು ಇತರ ಸದಸ್ಯರೊಂದಿಗೆ ತಮ್ಮ ಮತದಾನದ ಹಕ್ಕನ್ನು ಬಳಸಿಕೊಂಡರು ಮತ್ತು ಸೇವೆಗಳ ಬಳಕೆಯ ಆಧಾರದ ಮೇಲೆ ಸದಸ್ಯರಿಗೆ 40% ಲಾಭವನ್ನು ಪಾವತಿಸುವ ನಿರ್ಧಾರವನ್ನೂ ತೆಗೆದುಕೊಂಡರು.

ಕೆಳಗಿನವುಗಳ ಬಗ್ಗೆ ಚರ್ಚಿಸಿ:

1.ಬಾಲಯ್ಯ ಮತ್ತು ಇತರ ಕೆಲವು ಸದಸ್ಯರು ವಾರ್ಷಿಕ ಸಾಮಾನ್ಯ ಸಭೆಗಳಲ್ಲಿ ಭಾಗವಹಿಸಲು ಮತ್ತು ಮತ ಚಲಾಯಿಸಲು ಏಕೆ ಅನರ್ಹರಾದರು?

2.ರೈತ ಉತ್ಪಾದಕ ಸಂಸ್ಥೆಯಲ್ಲಿ ಯಾರು ನಿರ್ಧಾರವನ್ನು ತೆಗೆದುಕೊಳ್ಳುತ್ತಾರೆ?

3.ಮೇಲಿನ ಪ್ರಕರಣದ ಆಧಾರದ ಮೇಲೆ, ಸದಸ್ಯರು ಮತ್ತು ರೈತ ಉತ್ಪಾದಕ ಸಂಸ್ಥೆಯ ನಡುವಿನ ಸಂಬಂಧವನ್ನು ಪಟ್ಟಿ ಮಾಡಿ?

4.ಲಾಭದ ಪಾಲಿನ ಶೇಕಢಾ 40ನ್ನು ಪಡೆಯಲು ಬಾಲಯ್ಯ ಇನ್ನೂ ಅರ್ಹರಾಗಿರುತ್ತಾರೆಯೇ?

## ಚಟುವಟಿಕೆ 2:

ರೈತ ಉತ್ಪಾದಕ ಸಂಸ್ಥೆಗಳಲ್ಲಿ ಸದಸ್ಯತ್ವದ ಕೆಲವು ಸಂದರ್ಭಗಳನ್ನು ಕೆಳಗೆ ನೀಡಲಾಗಿದೆ. ನಾವು ನೀಡುವ ಅಂಶಗಳ ಆಧಾರದ ಮೇಲೆ ನಮ್ಮ ರೈತ ಉತ್ಪಾದಕ ಸಂಸ್ಥೆಯನ್ನು ಮೌಲ್ಯಮಾಪನ ಮಾಡೋಣ. ಅದಲ್ಲದೆ, ರೇಟಿಂಗ್ ಸರಾಸರಿ ಮತ್ತು ಕಡಿಮೆ ಇರುವ ಸದಸ್ಯತ್ವ ಪರಿಸ್ಥಿತಿಯನ್ನು ಸುಧಾರಿಸಲು ತೆಗೆದುಕೊಳ್ಳಬೇಕಾದ ಕ್ರಮಗಳನ್ನು ಸೂಚಿಸೋಣ.

ತುಂಬಾ ಕಡಿಮೆ (1) – ಕಡಿಮೆ (2) – ಸರಾಸರಿ (3) – ಹೆಚ್ಚು (4) – ಅತಿ ಹೆಚ್ಚು (5)

1. ರೈತ ಉತ್ಪಾದಕ ಸಂಸ್ಥೆಯ ಕಾರ್ಯಾಚರಣೆಯ ಪ್ರದೇಶದಲ್ಲಿನ ಒಟ್ಟು ಸಂಭಾವ್ಯ ಸದಸ್ಯರಲ್ಲಿ ಶೇಕಡಾ 80 ರಷ್ಟು ಆ ರೈತ ಉತ್ಪಾದಕ ಸಂಸ್ಥೆಯ ಸದಸ್ಯರಾಗಿರುತ್ತಾರೆ.

ರೇಟಿಂಗ್: ____________________

ತೆಗೆದುಕೊಳ್ಳಬೇಕಾದ ಕ್ರಮ: ____________________

2. ಶ್ರೀಮತಿ ಶ್ಯಾಮಲಾ ರಾಂಪುರ್ ಹಾಲಿನ ಸಹಕಾರಿ ಸಂಸ್ಥೆಯ ಸದಸ್ಯರಾಗಿರುತ್ತಾರೆ. ಅವರು ಸಂಸ್ಥೆಗೆ ಹಾಲು ಪೂರೈಸುತ್ತಾರೆ ಮತ್ತು ಸಂಸ್ಥೆಯ ಪಶುವೈದ್ಯಕೀಯ ಸೇವೆಗಳನ್ನು ಸಹ ಪಡೆಯುತ್ತಾರೆ. ಆದಾಗ್ಯೂ, ಅವರು ಎಂದಿಗೂ ಸಾಮಾನ್ಯ ಸಭೆ ಮತ್ತು ಮತದಾನಕ್ಕೆ ಹಾಜರಾಗುವುದಿಲ್ಲ. ಶ್ಯಾಮಲಾ ಸಹಕಾರಿ ಸದಸ್ಯರಾಗಿ ಮುಂದುವರಿಯಬಹುದೇ?

ರೇಟಿಂಗ್: ____________________

ತೆಗೆದುಕೊಳ್ಳಬೇಕಾದ ಕ್ರಮ: ____________________

3. ಬಾಲಯ್ಯ ಗೋಡಂಬಿ ಸಂಗ್ರಹಣೆ ಮತ್ತು ಸಂಸ್ಕರಣೆಯಲ್ಲಿ ತೊಡಗಿರುವ ಸಹಕಾರಿ ಸಂಸ್ಥೆಯ ಸದಸ್ಯರಾಗಿರುತ್ತಾರೆ. ಆದರೆ, ಬಾಲಯ್ಯ ತನ್ನ ಗೋಡಂಬಿ ಉತ್ಪನ್ನಗಳನ್ನು ಸಹಕಾರಿ ಸಂಸ್ಥೆಗೆ ಎಂದಿಗೂ ಪೂರೈಸುವುದಿಲ್ಲ. ಅವರು ಸಹಕಾರಿ ಸಂಸ್ಥೆಯ ಸದಸ್ಯರಾಗಿ ಮುಂದುವರಿಯಬಹುದೇ?

ರೇಟಿಂಗ್: ____________________

ತೆಗೆದುಕೊಳ್ಳಬೇಕಾದ ಕ್ರಮ: ____________________

4. ಶ್ರೀಮತಿ ಜಯಾದೇವಿ ರಂಗಾಪುರ ಹಾಲಿನ ಸಹಕಾರಿ ಸಂಸ್ಥೆಯ ಸದಸ್ಯರಾಗಿರುತ್ತಾರೆ. ಅವರು ನಿಯಮಿತವಾಗಿ ಸಂಸ್ಥಗೆ ಹಾಲು ಪೂರೈಸುತ್ತಾರೆ, ಹಾಲಿನ ಸಹಕಾರಿ ಸಂಸ್ಥೆಯ ವಿವಿಧ ಸೇವೆಗಳನ್ನು ಪಡೆಯುತ್ತಾರೆ ಮತ್ತು ಸಾಮಾನ್ಯ ಸಭೆಗಳಲ್ಲೂ ಭಾಗವಹಿಸುತ್ತಾರೆ ಮತ್ತು ಮತದಾನ ಮತ್ತು ನಿರ್ಧಾರ ತೆಗೆದುಕೊಳ್ಳುವಲ್ಲಿ ಭಾಗವಹಿಸುತ್ತಾರೆ. ಅವರನ್ನು ಹಾಲಿನ ಸಹಕಾರಿ ಸಂಸ್ಥೆಯ ಸದಸ್ಯೆರಾಗಿ ಮುಂದುವರಿಸಬಹುದೇ?

ರೇಟಿಂಗ್: ____________________

ತೆಗೆದುಕೊಳ್ಳಬೇಕಾದ ಕ್ರಮ: ____________________

5.ಹಾಲಿನ ಸಹಕಾರಿ ಸಂಸ್ಥೆಯ ಒಟ್ಟು 6,000 ಸದಸ್ಯರಲ್ಲಿ, ಶೇಕಡಾ 50% ರಷ್ಟು (ಅಂದರೆ 3,000) ಸದಸ್ಯರು ನಿಗದಿ ಪಡಿಸಿದ ಕನಿಷ್ಠ 1000 ಲೀಟರ್ ಹಾಲಿನ ಪ್ರಮಾಣವನ್ನು ಪೂರೈಸಲು ನಿಗದಿಪಡಿಸುತ್ತದೆ. ಹಾಲನ್ನು ಪ್ರತಿ ವರ್ಷ ಸಂಸ್ಥೆಗೆ ಒದಗಿಸುತ್ತಾರೆ.

ರೇಟಿಂಗ್: ____________________

ತೆಗೆದುಕೊಳ್ಳಬೇಕಾದ ಕ್ರಮ: ____________________________________________

6. ರೈತ ಉತ್ಪಾದಕ ಸಂಸ್ಥೆಯಲ್ಲಿ, ಸಾಮಾನ್ಯವಾಗಿ, ಕನಿಷ್ಠ ಶೇಕಡಾ 80% ರಷ್ಟು ಸದಸ್ಯರು ನಿಯಮಿತವಾಗಿ ಸಾಮಾನ್ಯ ಸಭೆಗಳಿಗೆ ಹಾಜರಾಗುತ್ತಾರೆ.

ರೇಟಿಂಗ್: ____________________

ತೆಗೆದುಕೊಳ್ಳಬೇಕಾದ ಕ್ರಮ: ____________________________________________

7. ಮತ್ತೊಂದು ರೈತ ಉತ್ಪಾದಕ ಸಂಸ್ಥೆಯಲ್ಲಿ, ಸಾಮಾನ್ಯವಾಗಿ ಶೇಕಡಾ 20% ರಷ್ಟು ಮಂಡಳಿಯ ಸದಸ್ಯರು ನಿರ್ಧಾರ ತೆಗೆದುಕೊಳ್ಳುವಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾರೆ.

ರೇಟಿಂಗ್: ____________________

ತೆಗೆದುಕೊಳ್ಳಬೇಕಾದ ಕ್ರಮ: ____________________________________________

8. ಮೂರನೇ ಒಂದು ಭಾಗದಷ್ಟು ಸದಸ್ಯರು 2 ವರ್ಷಗಳ ಅವಧಿಯಲ್ಲಿ ರೈತ ಉತ್ಪಾದಕ ಸಂಸ್ಥೆಯ ಸದಸ್ಯತ್ವದಿಂದ ಹಿಂದೆ ಸರಿಯುತ್ತಾರೆ.

ರೇಟಿಂಗ್: ____________________

ತೆಗೆದುಕೊಳ್ಳಬೇಕಾದ ಕ್ರಮ: ____________________________________________

9. ಸದಸ್ಯರ ಇಂಡೆಂಟ್‌ಗಳ ಆಧಾರದ ಮೇಲೆ ರಸಗೊಬ್ಬರಗಳ ಬೇಡಿಕೆಯ ಅಂದಾಜಿನ ನಂತರ, ರೈತ ಉತ್ಪಾದಕ ಸಂಸ್ಥೆಯು ಬೇಡಿಕೆಯ ಪ್ರಕಾರ 100 ಚೀಲ ರಸಗೊಬ್ಬರಗಳನ್ನು ಖರೀದಿಸುತ್ತದೆ. ಆದರೆ ವಾಸ್ತವವಾಗಿ ಸದಸ್ಯರು 100 ಚೀಲಗಳಲ್ಲಿ ಕೇವಲ 40 ಚೀಲಗಳನ್ನು ಮಾತ್ರ ತೆಗೆದುಕೊಂಡಿದ್ದಾರೆ.

ರೇಟಿಂಗ್: ____________________

ತೆಗೆದುಕೊಳ್ಳಬೇಕಾದ ಕ್ರಮ: ____________________________________________

10. ಸತತವಾಗಿ 3 ಋತುಗಳಲ್ಲಿ, ಹಾಲಿನ ಚಟುವಟಿಕೆಯಲ್ಲಿ ತೊಡಗಿರುವ ರೈತ ಉತ್ಪಾದಕ ಸಂಸ್ಥೆಯು "ಹಾಲು ಶೀತಲಿಕರಣ ಕೇಂದ್ರಕ್ಕೆ" ಒಟ್ಟು ಅಗತ್ಯವಿರುವ ಹಾಲಿನ ಶೇಕಡಾ 60% ರಷ್ಟು ಹಾಲನ್ನು ತಮ್ಮ ಹತ್ತಿರದಲ್ಲೆ ಇರುವ ಸದಸ್ಯರಿಂದ ತೆಗೆದುಕೊಳ್ಳದೆ, ದೂರದಲ್ಲಿ ನೆಲೆಸಿದ ಸದಸ್ಯರಲ್ಲದವರಿಂದ ತೆಗೆದುಕೊಳ್ಳುತ್ತದೆ.

ರೇಟಿಂಗ್: ____________________

ತೆಗೆದುಕೊಳ್ಳಬೇಕಾದ ಕ್ರಮ: ____________________________________________

**ಚಟುವಟಿಕೆ 3:**

ಮೇಲೆ ಚರ್ಚಿಸಿದ ಅಂಕಗಳನ್ನು ಆಧರಿಸಿ, ನಮ್ಮ ರೈತ ಉತ್ಪಾದಕ ಸಂಸ್ಥೆಯು ನಮ್ಮ ಸದಸ್ಯರಿಂದ ಎಷ್ಟರ ಮಟ್ಟಿಗೆ ಒಡೆತನದಲ್ಲಿದೆ ಮತ್ತು ನಿಯಂತ್ರಿಸಲ್ಪಡುತ್ತಿದೆ ಎಂದು ನಿರ್ಣಯಿಸೋಣ?____________________

____________________________________________________________

# 3

# ಸದಸ್ಯತ್ವದ ಪ್ರಮುಖ ಲಕ್ಷಣಗಳು

**ಅಧಿವೇಶನದ ಉದ್ದೇಶ:**



ರೈತ ಉತ್ಪಾದಕ ಸಂಸ್ಥೆಗಳಲ್ಲಿ ಸದಸ್ಯತ್ವದ ವಿವಿಧ ಪ್ರಮುಖ ವೈಶಿಷ್ಟ್ಯಗಳ ಬಗ್ಗೆ ತಿಳಿಯುವುದು.

**ವಿಷಯಗಳು :**

1. ಸದಸ್ಯರ ಒಗ್ಗೂಡಿಸುವಿಕೆ
2. ಸದಸ್ಯ ಕೇಂದ್ರೀಕೃತ
3. ರೈತ ಉತ್ಪಾದಕ ಸಂಸ್ಥೆಗಳ ಮತ್ತು ಸದಸ್ಯರ ಮಟ್ಟದಲ್ಲಿ ಲಾಭಗಳ ನಡುವೆ ಸಮತೋಲನ; ಅಲ್ಪಾವಧಿ ಮತ್ತು ದೀರ್ಘಾವಧಿ
4. ಸದಸ್ಯ ಸಂಬಂಧಗಳನ್ನು ಕಾಪಾಡಿಕೊಳ್ಳುವುದು

ಸದಸ್ಯರ ಪ್ರಾಮುಖ್ಯತೆ, ಮಾಲೀಕತ್ವ ಮತ್ತು ರೈತ ಉತ್ಪಾದಕ ಸಂಸ್ಥೆಗಳಲ್ಲಿನ ಸದಸ್ಯರ ನಿಯಂತ್ರಣದ ಬಗ್ಗೆ ತಿಳಿದಿರುವುದರಿಂದ, ಈಗ ಕೆಳಗೆ ಪಟ್ಟಿ ಮಾಡಲಾಗಿರುವಂತೆ ಸದಸ್ಯತ್ವದ ವಿವಿಧ ಪ್ರಮುಖ ವೈಶಿಷ್ಟ್ಯಗಳ ಬಗ್ಗೆ ತಿಳಿದುಕೊಳ್ಳೋಣ.


- ಸದಸ್ಯರ ಒಗ್ಗೂಡಿಸುವಿಕೆ
- ಸದಸ್ಯ ಕೇಂದ್ರೀಕೃತ
- ರೈತ ಉತ್ಪಾದಕ ಸಂಸ್ಥೆಗಳ ಮತ್ತು ಸದಸ್ಯರ ಮಟ್ಟದಲ್ಲಿ ಲಾಭಗಳ ನಡುವೆ ಸಮತೋಲನ; ಅಲ್ಪಾವಧಿ ಮತ್ತು ದೀರ್ಘಾವಧಿ
- ಸದಸ್ಯ ಸಂಬಂಧಗಳನ್ನು ಕಾಪಾಡಿಕೊಳ್ಳುವುದು

ಈಗ, ಈ ವೈಶಿಷ್ಟ್ಯಗಳನ್ನು ಒಂದೊಂದಾಗಿ ತಿಳಿದುಕೊಳ್ಳೋಣ.

## 3.1 ಸದಸ್ಯರ ಸಜ್ಜುಗೊಳಿಸುವಿಕೆ/ಒಗ್ಗೂಡಿಸುವಿಕೆ

ರೈತ ಉತ್ಪಾದಕ ಸಂಸ್ಥೆಯ ಕಾರ್ಯಸಾಧ್ಯತೆ ಮತ್ತು ಸುಸ್ಥಿರತೆಗಾಗಿ, ಸದಸ್ಯರು ರೈತ ಉತ್ಪಾದಕ ಸಂಸ್ಥೆಗಳ ಗ್ರಾಹಕರಾಗಿರುವುದರಿಂದ ನಾವು ಹೆಚ್ಚಿನ ರೈತರಿಗೆ ಸದಸ್ಯತ್ವವನ್ನು ನೀಡಬೇಕು ಹಾಗೂ ಅಗತ್ಯ ಸೇವೆಗಳನ್ನು ನೀಡುವ ಮೂಲಕ ಅವರನ್ನು ಉಳಿಸಿಕೊಳ್ಳುವುದು ಬಹಳ ನಿರ್ಣಾಯಕವಾಗಿದೆ. ನಮ್ಮ ರೈತ ಉತ್ಪಾದಕ ಸಂಸ್ಥೆಯಲ್ಲಿ ಸದಸ್ಯತ್ವವು ಹೇಗಿರಬೇಕೆಂದರೆ ನಾವು ಅವರಿಗೆ ಪರಿಣಾಮಕಾರಿಯಾಗಿ ಸೇವೆ ಕಲ್ಪಿಸಲು ಸಮರ್ಥವಾಗಿರಬೇಕು ಮತ್ತು ಅದೇ ಸಮಯದಲ್ಲಿ ರೈತ ಉತ್ಪಾದಕ ಸಂಸ್ಥೆಯ ಆಡಳಿತ ಮತ್ತು ನಿರ್ವಹಣೆಯಲ್ಲಿ ಸದಸ್ಯರ ಪರಿಣಾಮಕಾರಿ ಭಾಗವಹಿಸುವಿಕೆಗೆ ನಾವು ತಾಂತ್ರಿಕ ವ್ಯವಸ್ಥೆಯನ್ನು ಹೊಂದಿರಬೇಕು. ರೈತ ಉತ್ಪಾದಕ ಸಂಸ್ಥೆಯಲ್ಲಿ ಸದಸ್ಯರ ಸಜ್ಜುಗೊಳಿಸುವಿಕೆ ಮೂರು ಹಂತಗಳಲ್ಲಿ ನಡೆಯುತ್ತದೆ:

**ಚಿತ್ರ 2: ಸದಸ್ಯರ ಸಜ್ಜುಗೊಳಿಸುವಿಕೆ/ಒಗ್ಗೂಡಿಸುವಿಕೆ**




- ಸದಸ್ಯರ ದಾಖಲಾತಿ: ರೈತ ಉತ್ಪಾದಕ ಸಂಸ್ಥೆಯ ಕಾರ್ಯಾಚರಣೆಯ ಪ್ರದೇಶದಲ್ಲಿನ ಎಲ್ಲ ಸಂಭಾವ್ಯ ಸದಸ್ಯರು – ಸದಸ್ಯತ್ವ ಅರ್ಹತಾ ಮಾನದಂಡಗಳ ಪ್ರಕಾರ – ಷೇರು ಬಂಡವಾಳ ಒಟ್ಟುಗೂಡಿಸುವಿಕೆ

- ಸಕ್ರಿಯ ಸದಸ್ಯರು – ಕನಿಷ್ಠ ಸದಸ್ಯತ್ವ ಮುಂದುವರಿಕೆ ಮಾನದಂಡಗಳನ್ನು ಪೂರೈಸುವವರು – ಶೇಕಡಾ 100 ರಷ್ಟು ಸಕ್ರಿಯ ಸದಸ್ಯರು – ಸದಸ್ಯರನ್ನು ಉಳಿಸಿಕೊಳ್ಳುವುದು

- ಪೂರ್ಣಪ್ರಮಾಣದ ಸದಸ್ಯರ ಪ್ರೋತ್ಸಾಹ/ಪೋಷಕಾಂಷ – ಪ್ರೋತ್ಸಾಹ, ಅಂದರೆ, ಸದಸ್ಯರು ಎಲ್ಲಾ ಸೇವೆಗಳನ್ನು ಬಳಸುವುದು – ಕನಿಷ್ಠ ಸದಸ್ಯತ್ವ ಮುಂದುವರಿಕೆ ಮಾನದಂಡಗಳನ್ನು ಮೀರಿ – ಸಭೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದು, ಮತದಾನ, ನಿರ್ಧಾರ ತೆಗೆದುಕೊಳ್ಳುವುದು.

ಮೇಲೆ ಹೇಳಿದಂತೆ, ರೈತ ಉತ್ಪಾದಕ ಸಂಸ್ಥೆಯ ಸದಸ್ಯರನ್ನು ಷೇರುದಾರರನ್ನಾಗಿ ಸೇರಿಸಿಕೊಳ್ಳುವುದು ಮಾತ್ರವಲ್ಲ, ರೈತ ಉತ್ಪಾದಕ ಸಂಸ್ಥೆಯು ಕಾರ್ಯನಿರ್ವಹಿಸಲು, ಸದಸ್ಯರು ಸಕ್ರಿಯವಾಗಿರಬೇಕು, ಅಂದರೆ, ರೈತ ಉತ್ಪಾದಕ ಸಂಸ್ಥೆಯಿಂದ ಕನಿಷ್ಠ ನಿಗದಿಪಡಿಸಿದ ಸೇವೆಗಳನ್ನು ತಮ್ಮ ಬೈಲಾಗಳಲ್ಲಿ ತಿಳಿಸಿದಂತೆ ತೆಗೆದುಕೊಳ್ಳಬೇಕು (ಉದಾಹರಣೆಗೆ, ಹಾಲಿನ ಸಹಕಾರಿ ಸಂಸ್ಥೆಯಲ್ಲಿ ವರ್ಷದ 180 ದಿನಗಳಲ್ಲಿ 1000 ಲೀಟರ್ ಹಾಲಿನ ಪೂರೈಕೆ). ರೈತ ಉತ್ಪಾದಕರ ಸಂಸ್ಥೆಯ ಸುಸ್ಥಿರತೆಗಾಗಿ, ಸದಸ್ಯರು ನಿರ್ಧಾರ ತೆಗೆದುಕೊಳ್ಳುವಲ್ಲಿ ಮತ್ತು ಮತದಾನದಲ್ಲಿ ಸಕ್ರಿಯವಾಗಿ ಭಾಗವಹಿಸಬೇಕಾಗುತ್ತದೆ.

ಮೇಲಿನ ಎಲ್ಲಾ ಮೂರು ಹಂತಗಳಲ್ಲಿ ಸದಸ್ಯರನ್ನು ಸಜ್ಜುಗೊಳಿಸುವುದು ನಿರ್ದೇಶಕ ಮಂಡಳಿಯ ಪ್ರಮುಖ ಜವಾಬ್ದಾರಿಯಾಗಿದೆ. ಇದಕ್ಕಾಗಿ, ಸದಸ್ಯರ ಪೂರ್ಣ ಪ್ರೋತ್ಸಾಹ, ನಿಯಮಿತ ಮತ್ತು ಸರಿಯಾದ ಸಮಯದಲ್ಲಿ ಸಾಮಾನ್ಯ ಸಭೆಗಳು, ಚುನಾವಣೆಗಳು, ನಿರ್ಧಾರ ತೆಗೆದುಕೊಳ್ಳುವಿಕೆ ಇತ್ಯಾದಿಗಳಿಗಾಗಿ ಸದಸ್ಯತ್ವ ಮುಂದುವರಿಕೆಗೆ ಮೀರಿದ ಸೇವೆಗಳನ್ನು ನಿರ್ದೇಶಕ ಮಂಡಳಿಯು ಖಚಿತಪಡಿಸಿಕೊಳ್ಳಬೇಕು.

ಅಗತ್ಯವಿರುವಲ್ಲಿ ಸದಸ್ಯರಿಗೆ ಶಿಕ್ಷಣವನ್ನು ತಮ್ಮ ಸಿಬ್ಬಂದಿ ಅಥವಾ ಬೆಂಬಲ ಏಜೆನ್ಸಿಗಳ ಮೂಲಕ ಕಾಲಕಾಲಕ್ಕೆ ನಿರ್ದೇಶಕ ಮಂಡಳಿಯು ಖಚಿತಪಡಿಸಿಕೊಳ್ಳಬೇಕು, ಇದರಿಂದ ಅವರನ್ನು ಎಲ್ಲಾ ಮೂರು ಹಂತಗಳಲ್ಲಿ ಸಜ್ಜುಗೊಳಿಸಬಹುದು.

**ಆತ್ಮಾವಲೋಕನ ಪ್ರಶ್ನೆಗಳು:**

1. ನಿಮ್ಮ ಕಾರ್ಯಾಚರಣೆಯ ಪ್ರದೇಶದ ಬಹುಪಾಲು ಸಂಭಾವ್ಯ / ಅರ್ಹ ರೈತರು ನಿಮ್ಮ ರೈತ ಉತ್ಪಾದಕ ಸಂಸ್ಥೆಯ ಸದಸ್ಯರಾಗಿ ಸೇರಿಕೊಂಡಿದ್ದಾರೆಯೇ?
2. ನಿಮ್ಮ ರೈತ ಉತ್ಪಾದಕ ಸಂಸ್ಥೆಯ ಬಹುಪಾಲು ಸದಸ್ಯರು ಸಕ್ರಿಯ ಸದಸ್ಯರೇ?
3. ನಿಮ್ಮ ಸದಸ್ಯರ ಎಷ್ಟು ಪ್ರಮಾಣದ ಸದಸ್ಯರು ನಿಮ್ಮ ಸೇವೆಗಳನ್ನು ಸಕ್ರಿಯ ಸದಸ್ಯರ ಮಾನದಂಡಗಳನ್ನು ಮೀರಿ ಬಳಸುತ್ತಾರೆ ಮತ್ತು ನಿಮ್ಮ ರೈತ ಉತ್ಪಾದಕ ಸಂಸ್ಥೆಯ ವ್ಯವಹಾರಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾರೆ

## 3.2 ಸದಸ್ಯ ಕೇಂದ್ರೀಕೃತ

ಚರ್ಚೆಯ ಪ್ರಶ್ನೆ: ರೈತ ಉತ್ಪಾದಕ ಸಂಸ್ಥೆಯು ಎಲ್ಲಾ ಸಮಯದಲ್ಲೂ ತಮ್ಮ ಸದಸ್ಯರಿಗೆ ಸೀಮಿತ ಸೇವೆಗಳನ್ನು ಮಾತ್ರ ನೀಡಲು ಸಾಧ್ಯವಾದರೆ ಏನಾಗುತ್ತೆ?

ಸದಸ್ಯರು ರೈತ ಉತ್ಪಾದಕ ಸಂಸ್ಥೆಗಳ ಗ್ರಾಹಕರಾಗಿರುವುದರಿಂದ, ಇತರ ಸೇವಾ ಪೂರೈಕೆದಾರರಿಗೆ ಹೋಲಿಸಿದರೆ ರೈತ ಉತ್ಪಾದಕ ಸಂಸ್ಥೆಗಳು ತಮ್ಮ ಸದಸ್ಯರಿಗೆ ಹೆಚ್ಚು ಹತ್ತಿರವಾಗಿರಬೇಕು. ಉದಾಹರಣೆಗೆ, ಸದಸ್ಯರಿಂದ ನೆಲಗಡಲೆ ಖರೀದಿಸುತ್ತಿದ್ದರೆ, ರೈತ ಉತ್ಪಾದಕ ಸಂಸ್ಥೆಯು ಆ ಪ್ರದೇಶದ ಇತರ ಖರೀದಿದಾರರಿಗಿಂತ ಹೆಚ್ಚಿನ ಪ್ರಮಾಣವನ್ನು ಖರೀದಿ ಮಾಡಿರಬೇಕು.

ಅಂದರೆ ರೈತ ಉತ್ಪಾದಕ ಸಂಸ್ಥೆಯು ತನ್ನ ಕನಿಷ್ಠ 50% ಸದಸ್ಯರ ಅವಶ್ಯಕತೆಗಳನ್ನು ಸ್ಥಿರವಾದ ಮತ್ತು ಗುಣಮಟ್ಟದ ಸೇವೆಗಳನ್ನು ನೀಡಿದರೆ (ಆದರೆ ಯಾವುದೇ ಸೇವಾ ಪೂರೈಕೆದಾರರಿಗಿಂತ ಹೆಚ್ಚಾಗಿರಬೇಕು), ಅಂತಹ ರೈತ ಉತ್ಪಾದಕ ಸಂಸ್ಥೆಯು ಸದಸ್ಯರಿಗೆ ಕೇಂದ್ರೀಕೃತವಾಗಿದೆ ಎಂದು ನಾವು ಹೇಳಬಹುದು.

ಸದಸ್ಯ ಕೇಂದ್ರೀಕೃತ ಎಂದರೆ ರೈತ ಉತ್ಪಾದಕ ಸಂಸ್ಥೆಯು ತನ್ನ ಸದಸ್ಯರಿಗೆ ಒದಗಿಸುವ ಸೇವೆಗಳು ಸದಸ್ಯರ ಅಗತ್ಯತೆಗಳಿಗೆ ಎಷ್ಟು ಪ್ರಸ್ತುತ / ಮುಖ್ಯ ಎಂಬುದನ್ನು ಸೂಚಿಸುತ್ತವೆ. ಅಂದರೆ, ರೈತ ಉತ್ಪಾದಕ ಸಂಸ್ಥೆಯ ಸೇವೆಗಳು ಸದಸ್ಯರ ಅಗತ್ಯತೆಗಳನ್ನು ಪೂರೈಸಿದರೆ, ರೈತ ಉತ್ಪಾದಕ ಸಂಸ್ಥೆಯು ತಮಗೆ ಮಹತ್ವದ್ದಾಗಿದೆ ಎಂದು ಸದಸ್ಯರು ಭಾವಿಸುತ್ತಾರೆ.

**ಸದಸ್ಯ ಕೇಂದ್ರೀಕೃತ ವಿವರಣೆ:**

ಪಾವಗಡ ರೈತ ಉತ್ಪಾದಕ ಸಂಸ್ಥೆಯಲ್ಲಿ, ಎಲ್ಲಾ ಸದಸ್ಯರು ಪ್ರಮುಖವಾಗಿ ನೆಲಗಡಲೆ ಬೆಳೆಯುತ್ತಾರೆ. ಆ ರೈತ ಉತ್ಪಾದಕ ಸಂಸ್ಥೆಯಲ್ಲಿ ಸದಸ್ಯರ ಸರಾಸರಿ ವಿವರಗಳು ಈ ಕೆಳಗಿನಂತಿವೆ.

- ಪರಿಕರಗಳ ವೆಚ್ಚ – ಎಕರೆಗೆ ರೂ. 12,000 (ಬೀಜ, ರಸಗೊಬ್ಬರ, ಕೀಟನಾಶಕ ಸೇರಿದಂತೆ)
- ಉತ್ಪಾದನೆಯ ಮೌಲ್ಯ – ರೂ. 24,000 (ಎಕರೆಗೆ 6 ಕ್ವಿಂಟಾಲ್; ಬೆಲೆ ಕ್ವಿಂಟಾಲ್‌ಗೆ 4,000 ರೂ.)
- ರೈತ ಉತ್ಪಾದಕ ಸಂಸ್ಥೆಯಿಂದ ಸೇವೆಗಳ ಒಟ್ಟು ಮೌಲ್ಯ – ಎಕರೆಗೆ ರೂ. 36,000
- ಒಟ್ಟು ಪರಿಕರಗಳ ಖರೀಧಿಯಲ್ಲಿ ರೂ. 8,000 ನ್ನು (ಅವು ರಸಗೊಬ್ಬರ ಮತ್ತು ಬೀಜಗಳು) ರೈತ ಉತ್ಪಾದಕ ಸಂಸ್ಥೆಯಿಂದ ತೆಗೆದುಕೊಳ್ಳಲಾಗಿದೆ.
- ಉತ್ಪಾದನೆಯಲ್ಲಿ, 4 ಕ್ವಿಂಟಾಲ್‌ಗಳನ್ನು ರೈತ ಉತ್ಪಾದಕ ಸಂಸ್ಥೆಗೆ ಮಾರಾಟ ಮಾಡಲಾಗುತ್ತದೆ – ರೂ. 16,000
- ಹೀಗಾಗಿ, ರೈತ ಉತ್ಪಾದಕ ಸಂಸ್ಥೆಯಿಂದ ಪಡೆದ ಸೇವೆಗಳ ಒಟ್ಟು ಮೌಲ್ಯ – ರೂ. 24,000 (ರೂ. 8000 + ರೂ. 16,000)
- ಹೀಗಾಗಿ, ಅಗತ್ಯವಿರುವ ಒಟ್ಟು ಸೇವೆಗಳಲ್ಲಿ ಶೇಕಡಾ 66 ರಷ್ಟು (ರೂ. 36,000 ರಲ್ಲಿ 24,000 ರೂ) ಮೂರನೇ ಎರಡರಷ್ಟು ಭಾಗವನ್ನು ರೈತ ಉತ್ಪಾದಕ ಸಂಸ್ಥೆಯಿಂದ ತೆಗೆದುಕೊಳ್ಳಲಾಗುತ್ತಿದೆ. ಇದು ಉತ್ತಮ ಸದಸ್ಯ ಕೇಂದ್ರೀಕೃತವನ್ನು ತೋರಿಸುತ್ತದೆ.



## ಚಟುವಟಿಕೆ 2:

ರೈತ ಉತ್ಪಾದಕ ಸಂಸ್ಥೆಗಳಲ್ಲಿ ಸದಸ್ಯ ಕೇಂದ್ರೀಕೃತದ ಕೆಲವು ನಿದರ್ಶನಗಳನ್ನು ಕೆಳಗೆ ನೀಡಲಾಗಿದೆ. ಹಿಂದಿನ ಚರ್ಚೆಯ ಆಧಾರದ ಮೇಲೆ, ನಾವು ಪ್ರತಿ ನಿದರ್ಶನ ಸದಸ್ಯ ಕೇಂದ್ರೀಕೃತವಿದೆಯೋ ಇಲ್ಲವೋ (ಹೌದು / ಇಲ್ಲ) ಎಂದು ಉತ್ತರಿಸಬೇಕಾಗಿದೆ. ಅಲ್ಲದೆ, ಉತ್ತರಕ್ಕಾಗಿ ವಿವರಣೆಯನ್ನು ನೀಡಬೇಕಾಗಿದೆ.

1. ಒಬ್ಬ ರೈತ ತನ್ನ ಒಟ್ಟು 2.5 ಎಕರೆ ಜಮೀನಿನಲ್ಲಿ 2 ಎಕರೆ ಪ್ರದೇಶದಲ್ಲಿ ಹತ್ತಿಯನ್ನು ಬೆಳೆಸುತ್ತಾನೆ ಮತ್ತು ಹತ್ತಿ ಅವನ ಕುಟುಂಬಕ್ಕೆ ಪ್ರಮುಖ ಆದಾಯದ ಮೂಲವಾಗಿದೆ. ಹತ್ತಿಗೆ ಪರಿಕರಗಳ ಪೂರೈಕೆ, ಸಾಲ, ಸಂಗ್ರಹಣೆ, ಮೌಲ್ಯವರ್ಧನೆ ಮತ್ತು ಮಾರುಕಟ್ಟೆ ವ್ಯವಹಾರವನ್ನು ಕೈಗೊಳ್ಳಲು ಈ ಪ್ರದೇಶದಲ್ಲಿ ಒಂದು ರೈತ ಉತ್ಪಾದಕ ಸಂಸ್ಥೆಯು ಮುಂದೆ ಬರಲಿದೆ. ರೈತ ಉತ್ಪಾದಕ ಸಂಸ್ಥೆಯ ಸದಸ್ಯರಾಗಿ ಸೇರಲು ಆ ರೈತ ಆಸಕ್ತಿ ಹೊಂದಿದ್ದಾನೆಯೇ?

ಉತ್ತರ: ____________________

ವಿವರಣೆ: ____________________

____________________

____________________

2. ಮೇಲಿನ ಸಂದರ್ಭದಲ್ಲಿ, ಉದಾಹರಣೆಗೆ, 5 ವರ್ಷಗಳ ನಂತರ, ಸೋಯಾಬೀನ್ ಹತ್ತಿಗಿಂತ ಆದಾಯದಲ್ಲಿ ಪ್ರಾಥಮಿಕ ಮೂಲವಾಗಿದರೆ, ಸೋಯಾಬೀನ್ ಅವಶ್ಯಕತೆಗಾಗಿ ರೈತ ಉತ್ಪಾದಕ ಸಂಸ್ಥೆಯು ತನ್ನ ಸೇವೆಗಳನ್ನು ಬದಲಾಯಿಸಬೇಕೇ?

ಉತ್ತರ: ____________________

ವಿವರಣೆ: ____________________

____________________

____________________

3. ಇನ್ನೊಂದು ಸಂದರ್ಭದಲ್ಲಿ, ಈ ಪ್ರದೇಶದ ಬಹುಪಾಲು ರೈತರಿಗೆ ಭತ್ತದ ಜೀವನೋಪಾಯದ ಮೂಲವಾಗಿದೆ, ಆದರೆ ದನಕರುಗಳ ಸಾಕಾಣಿಕೆ ತುಂಬಾ ಕಡಿಮೆ. ಆದಾಗ್ಯೂ, ಈ ಪ್ರದೇಶದಲ್ಲಿ ಹಾಲು ಸಹಕಾರ ಸಂಘಯನ್ನು ಉತ್ತೇಜಿಸಲು ಉದ್ದೇಶಿಸಲಾಗಿದೆ. ಈ ರೈತ ಉತ್ಪಾದಕ ಸಂಸ್ಥೆಯು ಆ ಪ್ರದೇಶದ ಸದಸ್ಯರಿಗೆ ಕೇಂದ್ರೀಕೃತವಾಗಬಹುದೇ?

ಉತ್ತರ: ____________________

ವಿವರಣೆ: ____________________

____________________

____________________

## ಚಟುವಟಿಕೆ 3:

ಈ ಕೆಳಗಿನ ಅಂಶಗಳ ಕುರಿತು ನಮ್ಮ ಸದಸ್ಯರಿಗೆ ನಮ್ಮ ರೈತ ಉತ್ಪಾದಕ ಸಂಸ್ಥೆಯ ಸೇವೆಗಳ ಮೌಲ್ಯಮಾಪನವನ್ನು ಮಾಡೋಣ.

| ಕ್ರ.ಸಂ. | ವಿವರಗಳು | ಪ್ರಸ್ತುತ ಸ್ಥಿತಿ |
|---|---|---|
| 1 | ಸೇವೆ ಪಡೆಯುತ್ತಿರುವ ಸದಸ್ಯರ ಸಂಖ್ಯೆ | |
| 2 | ಸದಸ್ಯರಿಗೆ ಒದಗಿಸಲಾದ ಸೇವೆಗಳ ಮೌಲ್ಯ | |
| 3 | ಎಕರೆಗೆ ಪರಿಕರಗಳ ಪೂರೈಕೆಯ ವೆಚ್ಚ | |
| 4 | ಎಕರೆಗೆ ಉತ್ಪಾದನೆಯ ಮೌಲ್ಯ | |
| 5 | ಸೇವೆಗಳ ಒಟ್ಟು ಮೌಲ್ಯ | |
| 6 | ಒಟ್ಟು ಮೌಲ್ಯದಲ್ಲಿ, ರೈತ ಉತ್ಪಾದಕ ಸಂಸ್ಥೆಯಿಂದ ತೆಗೆದುಕೊಳ್ಳಲಾದ ಪರಿಕರಗಳು | |
| 7 | ಒಟ್ಟು ಉತ್ಪಾದನೆಯಲ್ಲಿ ರೈತ ಉತ್ಪಾದಕ ಸಂಸ್ಥೆಗೆ ಮಾರಾಟವಾದ ಪ್ರಮಾಣ (ಕ್ವಿಂಟಾಲ್‌ಗಳಲ್ಲಿ) | |
| 8 | ರೈತ ಉತ್ಪಾದಕ ಸಂಸ್ಥೆಯಿಂದ ತೆಗೆದುಕೊಳ್ಳಲಾದ ಸೇವೆಗಳ ಒಟ್ಟು ಮೌಲ್ಯ | |
| 9 | ರೈತ ಉತ್ಪಾದಕ ಸಂಸ್ಥೆಯಿಂದ ತೆಗೆದುಕೊಳ್ಳಲಾದ ಅಗತ್ಯವಿರುವ ಒಟ್ಟು ಸೇವೆಗಳ ಶೇಕಡಾವಾರು ಮೊತ್ತ | |
| 10 | ಸದಸ್ಯ ಕೇಂದ್ರೀಕೃತ (ಹೆಚ್ಚು / ಕಡಿಮೆ) | |

ಇತರೆ ಸೇವಾ ಪೂರೈಕೆದಾರರಿಗೆ ಹೋಲಿಸಿದರೆ ನಮ್ಮ ರೈತ ಉತ್ಪಾದಕ ಸಂಸ್ಥೆಯು ಸದಸ್ಯರಿಗೆ ಕೇಂದ್ರೀಕೃತವಾಗಿದೆಯೇ ಎಂದು ನಿರ್ಣಯಿಸೋಣ. ಇಲ್ಲದಿದ್ದರೆ, ನಮ್ಮ ರೈತ ಉತ್ಪಾದಕ ಸಂಸ್ಥೆವನ್ನು ನಮ್ಮ ಸದಸ್ಯರಿಗೆ ಹೆಚ್ಚು ಕೇಂದ್ರಿಕೃತವಾಗಿಸಲು ತೆಗೆದುಕೊಳ್ಳಬೇಕಾದ ಕ್ರಮಗಳು ಯಾವುವು?

## 3.3 ಸದಸ್ಯರು ಮತ್ತು ರೈತ ಉತ್ಪಾದಕ ಸಂಸ್ಥೆಯ ಮಟ್ಟದಲ್ಲಿ ಲಾಭಗಳನ್ನು ಸಮತೋಲನಗೊಳಿಸುವುದು

ಈ ವಿಭಾಗದಲ್ಲಿ, ಸದಸ್ಯರ ಮತ್ತು ರೈತ ಉತ್ಪಾದಕ ಸಂಸ್ಥೆಗಳ ಮಟ್ಟದಲ್ಲಿ ಅಲ್ಪಾವಧಿಯ ಮತ್ತು ದೀರ್ಘಾವಧಿ ತಕ್ಕಂತೇ ಪ್ರಯೋಜನಗಳನ್ನು ಸಮತೋಲನಗೊಳಿಸುವ ಪ್ರಮುಖ ಅವಶ್ಯಕತೆಯನ್ನು ನಾವು ನೋಡುತ್ತೇವೆ. ರೈತ ಉತ್ಪಾದಕ ಸಂಸ್ಥೆಯ ಪ್ರಮುಖ ಉದ್ದೇಶವೆಂದರೆ ಅವರ ಸದಸ್ಯರಿಗೆ ಅನುಕೂಲ ಒದಗಿಸುವಿದು, ರೈತ ಉತ್ಪಾದಕ ಸಂಸ್ಥೆಯಯು ಸಹ ಅಣತ್ಯವಾದ ಲಾಭವನ್ನು ಖಚಿತಪಡಿಸಿಕೊಳ್ಳುವುದು ಬಹಳ ಮುಖ್ಯ. ರೈತ ಉತ್ಪಾದಕ ಸಂಸ್ಥೆಗೆ ಯಾವುದೇ ಲಾಭವಿಲ್ಲದಿದ್ದರೆ ರೈತ ಉತ್ಪಾದಕ ಸಂಸ್ಥೆಯನ್ನು ನಡೆಸಲು ಸಾಧ್ಯವಾಗುವುದಿಲ್ಲ ಮತ್ತು ಅಗತ್ಯ ಸೇವೆಗಳನ್ನು ಒದಗಿಸಲೂ ಸಾಧ್ಯವಾಗುವುದಿಲ್ಲ, ಇದರಿಂದ ಸದಸ್ಯರಿಗೂ ಯಾವುದೇ ಪ್ರಯೋಜನವಾಗುವುದಿಲ್ಲ.

ಈಗ, ಎರಡು ವಿಭಿನ್ನ ರೈತ ಉತ್ಪಾದಕ ಸಂಸ್ಥೆಗಳ ಕೆಳಗಿನ ಎರಡು ಸನ್ನಿವೇಶಗಳನ್ನು ನೋಡೋಣ.

ರೈತ ಉತ್ಪಾದಕ ಸಂಸ್ಥೆ 1: ರೈತ ಉತ್ಪಾದಕ ಸಂಸ್ಥೆಯು ತಮ್ಮ ಸದಸ್ಯರಿಂದ ತರಕಾರಿಗಳನ್ನು ಖರೀದಿಸಿ ಮತ್ತು ಕಾರ್ಪೊರೇಟ್ ಖರೀದಿದಾರರಿಗೆ ಮಾರಾಟ ಮಾಡುತ್ತಿದೆ. ಸದಸ್ಯರಿಗೆ ಈ ಸೇವೆಯನ್ನು ನೀಡಲು, ರೈತ ಉತ್ಪಾದಕ ಸಂಸ್ಥೆಯು ಅಗತ್ಯವಿರುವ ಎಲ್ಲಾ ವೆಚ್ಚಗಳನ್ನು ಹೂಡಿಕೆಯ ವೆಚ್ಚ (ಸಂಗ್ರಹ ಕೇಂದ್ರ, ಸಾರಿಗೆ ವಾಹನ), ಸಿಬ್ಬಂದಿ, ಕಾರ್ಮಿಕ ಇತ್ಯಾದಿಗಳಿಗೆ ಭರಿಸಿತು. ಆದರೆ, ರೈತ ಉತ್ಪಾದಕ ಸಂಸ್ಥೆಯ ನಿರ್ದೇಶಕರ ಮಂಡಳಿಯು ಎಲ್ಲಾ ಒಳ್ಳೆಯ ಗುಣಮಟ್ಟದ ಉತ್ಪನ್ನಗಳಗೆ ಮಾರುಕಟ್ಟೆ ಬೆಲೆಗಿಂತ ಹೆಚ್ಚಿನ ಬೆಲೆಯನ್ನು ತನ್ನ ಸದಸ್ಯರಿಗೆ ನೀಡಿತು. ಇದು ರೈತ ಉತ್ಪಾದಕ ಸಂಸ್ಥೆಗೆ ನಷ್ಟವನ್ನುಂಟುಮಾಡಿತು ಮತ್ತು ಹೂಡಿಕೆ ಮತ್ತು ವ್ಯವಹಾರ ಬಂಡವಾಳದ ವೆಚ್ಚಗಳನ್ನು ಸಹ ಸರಿದೂಗಿಸಲಿಲ್ಲ.

ರೈತ ಉತ್ಪಾದಕ ಸಂಸ್ಥೆ 2: ಈ ರೈತ ಉತ್ಪಾದಕ ಸಂಸ್ಥೆಯು ಸಹ ಅದೇ ಸೇವೆಯಲ್ಲಿ ತೊಡಗಿಸಿಕೊಂಡಿದ್ದೂ, ಅದೇ ರೀತಿ ವೆಚ್ಚವನ್ನು ಬರಿಸುತ್ತದೆ. ಆದರೆ, ಇದರಿಂದ ಸದಸ್ಯರು ದೀರ್ಘಾವಧಿಯಲ್ಲಿ ಲಾಭ ಪಡೆಯುತ್ತಾರೆ ಮತ್ತು ರೈತ ಉತ್ಪಾದಕ ಸಂಸ್ಥೆಯು ಕೂಡ ಹೆಚ್ಚಿನ ಲಾಭವನ್ನು ಗಳಿಸುತ್ತಿದೆ, ಈ ಕಾರಣದಿಂದ ಸಂಸ್ಥೆಯು ತನ್ನ ಸದಸ್ಯರಿಗೆ ಉತ್ತಮ ರೀತಿಯಲ್ಲಿ ಸೇವೆಯನ್ನು ಕೊಡುತ್ತದೆ.

ಮೇಲಿನ ಎರಡು ಸನ್ನಿವೇಶಗಳ ಬಗ್ಗೆ ಪರಿಣಾಮಗಳನ್ನು ಬರೆಯಿರಿ.

| ರೈತ ಉತ್ಪಾದಕ ಸಂಸ್ಥೆ 1 | ರೈತ ಉತ್ಪಾದಕ ಸಂಸ್ಥೆ 2 |
|---|---|
| | |

ತರಕಾರಿಗಳನ್ನು ಗುಣಮಟ್ಟದ ಆಧಾರದ ಮೇಲೆ ಮೂರು ಗುಂಪುಗಳಾಗಿ ವಿಂಗಡಿಸಿ ನ್ಯಾಯೋಚಿತವಾಗಿ ಗುಣಮಟ್ಟ, ತೂಕ, ಶುಲ್ಕ, ಸಾಗಣೆ ಚೆವ್ವ, ಕಾಯುವ ಸಮಯ ಆಧಾರದ ಮೇಲೆ ಮಾರುಕಟ್ಟೆ ಬೆಲೆಗಳನ್ನು ಪರಿಗಣಿಸಿ ಸ್ಪರ್ಧಾತ್ಮಕ ಬೆಲೆಯನ್ನು ನೀಡಿತು.

ಈ ವಿಶ್ಲೇಷಣೆಯಿಂದ, ಯಾವುದೇ ಸೇವೆಯು ಸದಸ್ಯರಿಗೆ ಮಾತ್ರ ಲಾಭವನ್ನು ತಂದುಕೊಡುವುದಲ್ಲದೆ ರೈತ ಉತ್ಪಾದಕ ಸಂಸ್ಥೆಯು ಸಹ ಲಾಭವನ್ನು ಗಳಿಸಬೇಕು ಎನ್ನುವುದು ಬಹಳ ಸ್ಪಷ್ಟವಾಗಿದೆ. ಯಾವುದೇ ಚಟುವಟಿಕೆಯಿಂದ ಸದಸ್ಯರಿಗೆ ಮಾತ್ರ ಪ್ರಯೋಜನವಾಗುವುದು ಆದರೆ ರೈತ ಉತ್ಪಾದಕ ಸಂಸ್ಥೆಗೆ ಆಗದಿರುವುದು ಅಥವಾ ರೈತ ಉತ್ಪಾದಕ ಸಂಸ್ಥೆಗೆ ಮಾತ್ರ ಪ್ರಯೋಜನವಾಗಿ ಆದರೆ ಸದಸ್ಯರಿಗೆ ಆಗದಿರುವುದು ಸರಿಯಲ್ಲ. ಸದಸ್ಯರು ಮತ್ತು ರೈತ ಉತ್ಪಾದಕ ಸಂಸ್ಥೆಗಳ ಮಟ್ಟದಲ್ಲಿ ಲಾಭಗಳನ್ನು ಸಮತೋಲನಗೊಳಿಸುವುದು ನಿರ್ದೇಶಕರ ಮಂಡಳಿಯ ನಿರ್ಣಾಯಕ ಕರ್ತವ್ಯವಾಗಿದೆ. ನಿರ್ದೇಶಕರು ಈ ಬಗ್ಗೆ ಅಗತ್ಯ ಶಿಕ್ಷಣವನ್ನು ತೆಗೆದುಕೊಳ್ಳಬೇಕಾಗುತ್ತದೆ.

ಈಗ, ಸದಸ್ಯರ ನಿರೀಕ್ಷೆಗಳು ಮತ್ತು ರೈತ ಉತ್ಪಾದಕ ಸಂಸ್ಥೆ ಕಾರ್ಯಸಾಧ್ಯತೆಯ ನಡುವಿನ ಸಂಘರ್ಷಣೆಯ ಇತರ ಉದಾಹರಣೆಗಳನ್ನು ನೋಡೋಣ.


| ಸೇವೆ | ಸದಸ್ಯರ ನಿರೀಕ್ಷೆ | ರೈತ ಉತ್ಪಾದಕ ಸಂಸ್ಥೆಯ ಕಾರ್ಯಸಾಧ್ಯತೆ |
|---|---|---|
| ರಸಗೊಬ್ಬರ ಪೂರೈಕೆ | ಕಡಿಮೆ ವೆಚ್ಚ, ಮನೆಮನೆಗೆ ವಿತರಣೆ | ರಸಗೊಬ್ಬರ ವ್ಯವಹಾರದಲ್ಲಿ ಕಡಿಮೆ ಲಾಭ |
| ಕೃಷಿ ಯಂತ್ರೋಪಕರಣಗಳು | ಹೆಚ್ಚಿನ ಅವಧಿ ಮತ್ತು ಹೆಚ್ಚಿನ ಹೊರೆ ಹೆವಿಡ್ಯೂಟಿ ಯಂತ್ರಗಳ ನಿರೀಕ್ಷೆ | ಯಂತ್ರೋಪಕರಣಗಳ ಸವಕಳಿ, ಹೆಚ್ಚಿನ ಕಾರ್ಯಾಚರಣೆ ಮತ್ತು ನಿರ್ವಹಣಾ ವೆಚ್ಚಗಳು |
| ತರಕಾರಿಗಳ ಖರೀದಿ | ಕಳಪೆ ಗುಣಮಟ್ಟಕ್ಕೆ ಹೆಚ್ಚಿನ ಬೆಲೆ, ಸ್ಥಳದಲ್ಲೇ ಪಾವತಿಸುವುದು | ಗುಣಮಟ್ಟ ಕ್ಷೀಣಿಸುವ ಅಪಾಯ, ಮಾರುಕಟ್ಟೆಯ ಅಪಾಯ |

ಮೇಲಿನ ಉದಾಹರಣೆಗಳಿಂದ, ಕೆಲವೊಮ್ಮೆ ಸದಸ್ಯರ ನಿರೀಕ್ಷೆಗಳು ಮತ್ತು ರೈತ ಉತ್ಪಾದಕ ಸಂಸ್ಥೆಯ ಕಾರ್ಯಸಾಧ್ಯತೆಯ ನಡುವೆ ಸಂಘರ್ಷಗಳು ಉಂಟಾಗಬಹುದು. ಇತರ ಯಾವುದೇ ಸೇವಾ ಪೂರೈಕೆದಾರರಿಗೆ ಹೋಲಿಸಿದರೆ ಸದಸ್ಯರ ನಿರೀಕ್ಷೆಗಳು ತುಂಬಾ ಹೆಚ್ಚಿದ್ದರೆ, ಅದು ರೈತ ಉತ್ಪಾದಕ ಸಂಸ್ಥೆಗೆ ಹೆಚ್ಚಿನ ವೆಚ್ಚವನ್ನು ಭರಿಸಬೇಕಾಗುತ್ತದೆ ಮತ್ತು ರೈತ ಉತ್ಪಾದಕ ಸಂಸ್ಥೆಯ ಆದಾಯದ ಮೂಲಕ ವೆಚ್ಚಗಳನ್ನು ಪೂರೈಸಲು ಸಾಧ್ಯವಿಲ್ಲ ಆದ್ದರಿಂದ ಅದರ ಸೇವೆಗಳನ್ನು ಉಳಿಸಿಕೊಳ್ಳಲು ಸಾಧ್ಯವಿಲ್ಲ. ಹೀಗಾಗಿ, ಎಲ್ಲಾ ಸಮಯದಲ್ಲೂ ಸದಸ್ಯರ ನಿರೀಕ್ಷೆ ಮತ್ತು ರೈತ ಉತ್ಪಾದಕ ಸಂಸ್ಥೆಗಳ ಕಾರ್ಯಸಾಧ್ಯತೆಯನ್ನು ಸಮತೋಲನಗೊಳಿಸುವುದು ನಿರ್ದೇಶಕರ ಮಂಡಳಿಯ ಸದಸ್ಯರ ಪ್ರಮುಖ ಕರ್ತವ್ಯವಾಗಿದೆ.



## ಅಲ್ಪಾವಧಿಯ ಮತ್ತು ದೀರ್ಘಾವಧಿಯ ಪ್ರಯೋಜನಗಳನ್ನು ಸಮತೋಲನಗೊಳಿಸುವುದು

ಅಲ್ಪಾವಧಿಯ ಮತ್ತು ದೀರ್ಘಾವಧಿಯ ಪ್ರಯೋಜನಗಳ ನಡುವೆ ಸಮತೋಲನ ಸಾಧಿಸುವ ಮೂಲಕ ಸದಸ್ಯರನ್ನು ಒಟ್ಟುಗೂಡಿಸುವುದು ಸಹ ಬಹಳ ಮುಖ್ಯ. ಅಲ್ಪಾವಧಿಯಲ್ಲಿ ಸಹ ಕೆಲವು ಸ್ಪರ್ಧಿಗಳು ತಾತ್ಕಾಲಿಕ ಆಕರ್ಷಣೆಯನ್ನು ನೀಡುವ ಮೂಲಕ ಸದಸ್ಯರನ್ನು ಆಕರ್ಷಿಸಲು ಪ್ರಯತ್ನಿಸಬಹುದು, ರೈತ ಉತ್ಪಾದಕ ಸಂಸ್ಥೆಯ ಸದಸ್ಯರಾಗಿರುವ ಮೂಲಕ ಸದಸ್ಯರಿಗೆ ದೀರ್ಘಾವಧಿಯ ಪ್ರಯೋಜನಗಳ ಬಗ್ಗೆ ತಿಳುವಳಿಕೆ ನೀಡುವುದು ಮುಖ್ಯ.



ಉದಾಹರಣೆಗೆ, ರೈತ ಉತ್ಪಾದಕ ಸಂಸ್ಥೆಯು ತನ್ನ ಸದಸ್ಯರಿಂದ ಟೊಮೆಟೊವನ್ನು ಖರೀದಿಸುತ್ತದೆ ಮತ್ತು ಖರೀದಿದಾರರಿಗೆ ಮಾರಾಟ ಮಾಡುತ್ತದೆ. ತಮ್ಮ ಸದಸ್ಯರಿಗೆ ತಕ್ಷಣವೇ ಹೆಚ್ಚಿನ ಲಾಭ ತರುವ ಭರಾಟೆಯಲ್ಲಿ, ರೈತ ಉತ್ಪಾದಕ ಸಂಸ್ಥೆಯು ಪ್ರತಿ ಕೆಜಿಗೆ 10 ರೂ. ಅಂತೆ ಪಾವತಿಸುತ್ತದೆ ಆದರೆ ಅದೇ ಗುಣಮಟ್ಟದ ಚಾಲ್ತಿಯಲ್ಲಿರುವ ಮಾರುಕಟ್ಟೆ ದರ ರೂ. ಇದ್ದು, ಇದು ಅಲ್ಪಾವಧಿಯ ಲಾಭಕ್ಕಾಗಿ ಮಾತ್ರ ಸದಸ್ಯರು ಆಕರ್ಷಿತರಾಗುವ ಪರಿಸ್ಥಿತಿಗೆ ಕಾರಣವಾಗುತ್ತದೆ, ರೈತ ಉತ್ಪಾದಕ ಸಂಸ್ಥೆಯು ಉತ್ಪನ್ನಗಳನ್ನು ಪ್ರತಿ ಕೆ.ಜಿ.ಗೆ 10 ರೂ.ಗಿಂತಲು ಹೆಚ್ಚಿನ ಬೆಲೆಗೆ ವ್ಯಾಪಾರ ಮಾಢಲು ಆಗದಿದ್ದ ಕಾರಣ ನಷ್ಟವನ್ನು ಅನುಭವಿಸುತ್ತದೆ ಮತ್ತು ಇದರಿಂದ ಮುಂದೆ ಸದಸ್ಯರಿಂದ ಖರೀದಿಸುವ ಸೇವೆಯನ್ನು ವಿಸ್ತರಿಸಲಾಗುವುದಿಲ್ಲ.

ರೈತ ಉತ್ಪಾದಕ ಸಂಸ್ಥೆಯು ಸದಸ್ಯರ ಸ್ವಂತ ಸಂಸ್ಥೆಯಗಿದ್ದರಿಂದ ನಿರ್ದೇಶಕರ ಮಂಡಳಿಯು ರೈತ ಉತ್ಪಾದಕ ಸಂಸ್ಥೆಯ ಮಟ್ಟದಲ್ಲಿ ಕಾರ್ಯಸಾಧ್ಯತೆಯ ಅಗತ್ಯತೆಯ ಬಗ್ಗೆ ತನ್ನ ಸದಸ್ಯರಿಗೆ ಅಗತ್ಯವಾದ ಶಿಕ್ಷಣವನ್ನು ನೀಡಬೇಕಾಗುತ್ತದೆ. ಲಾಭದಾಯಕ ಚಟುವಟಿಕೆಗಳು ರೈತ ಉತ್ಪಾದಕ ಸಂಸ್ಥೆಗೆ ಹೆಚ್ಚಿನ ಹೂಡಿಕೆಗೆ ಕಾರಣವಾಗುತ್ತದೆ ಮತ್ತು ಇದರಿಂದಾಗಿ ಗುಣಮಟ್ಟದ ಸೇವೆಗಳನ್ನು ನೀಡುವುದನ್ನು ಮುಂದುವರಿಸಬಹುದು, ಇದರ ಮೂಲಕ ಸದಸ್ಯರು ದೀರ್ಘಾವಧಿಯಲ್ಲಿ ಲಾಭ ಪಡೆಯುತ್ತಾರೆ. ಇಲ್ಲದಿದ್ದರೆ, ಸದಸ್ಯರು ಅಲ್ಪಾವಧಿಗೆ ಪ್ರಯೋಜನವನ್ನು ಪಡೆಯಬಹುದು ಆದರೆ ರೈತ ಉತ್ಪಾದಕ ಸಂಸ್ಥೆಗಳು ಕಾರ್ಯಸಾಧ್ಯವಾಗುವುದಿಲ್ಲ ಮತ್ತು ಆದ್ದರಿಂದ ಸದಸ್ಯರಿಗೆ ಸೇವೆಗಳನ್ನು ನೀಡುವುದನ್ನು ಮುಂದುವರಿಸಲು ಸಾಧ್ಯವಾಗುವುದಿಲ್ಲ, ಇದರಿಂದಾಗಿ ಸದಸ್ಯರಿಗೆ ಯಾವುದೇ ಪ್ರಯೋಜನವಾಗುವುದಿಲ್ಲ.

## 3.4 ಸದಸ್ಯರ ಜೊತೆಗಿನ ಸಂಬಂಧಗಳು

ಸದಸ್ಯರು ರೈತ ಉತ್ಪಾದಕ ಸಂಸ್ಥೆಯ ಮಾಲೀಕರು ಮತ್ತು ಗ್ರಾಹಕರಾಗಿರುವುದರಿಂದ, ರೈತ ಉತ್ಪಾದಕ ಸಂಸ್ಥೆಯ ವ್ಯವಹಾರದ ಕಾರ್ಯಸಾಧ್ಯತೆ ಮತ್ತು ಸುಸ್ಥಿರತೆಗಾಗಿ ಅವರೊಂದಿಗೆ ಉತ್ತಮ ಸಂಬಂಧವನ್ನು ಕಾಪಾಡಿಕೊಳ್ಳುವುದು ಬಹಳ ಮುಖ್ಯ. ಸದಸ್ಯರ ಜೊತೆಗಿನ ಸಂಬಂಧಗಳನ್ನು ಗಟ್ಟಿಗೊಳಿಸುವ ಮಾರ್ಗಗಳನ್ನು ಕೆಳಗೆ ನೀಡಲಾಗಿದೆ.

| | |
|---|---|
| ಮಾಹಿತಿ ಮತ್ತು ಸಂವಹನ | • ಕರಪತ್ರಗಳು<br>• ವಾರ್ಷಿಕ ವರದಿ<br>• ಮಾಹಿತಿ ಮಂಡಳಿ |
| ಸೇವೆಗಳ ಬಗ್ಗೆ ಸದಸ್ಯರ ಪ್ರತಿಕ್ರಿಯೆ ಪಡೆಯುವುದು | • ಸೇವೆಗಳು<br>• ಕುಂದುಕೊರತೆಗಳ ಪರಿಹಾರ |
| ಸೌಲಭ್ಯಗಳು | • ರೈತ ಉತ್ಪಾದಕ ಸಂಸ್ಥೆಯ ಕಚೇರಿಯಲ್ಲಿ<br>• ಸದಸ್ಯರ ಸಂವಹನಾ ಕ್ಷೇತ್ರಗಳಾದ ಸಂಗ್ರಹ ಕೇಂದ್ರ, ಪರಿಕರಗಳ ವಿತರಣಾ ಕೇಂದ್ರ |
| ಸೇವಾ ವಿತರಣೆ | • ಸಮಯಕ್ಕೆ ಸರಿಯಾದ ಗುಣಮಟ್ಟದ ಸೇವೆಗಳು<br>• ಉತ್ತಮ ವ್ಯವಹಾರ ನೀಡುವ ಸದಸ್ಯರಿಗೆ ಪ್ರೋತ್ಸಾಹ / ಪ್ರಶಸ್ತಿಗಳು |
| ಅಗತ್ಯತೆಯನ್ನು ಗುರುತಿಸುವುದು | • ಕಾಲಕಾಲಕ್ಕೆ (ಅಗತ್ಯಗಳನ್ನು) ಪರಿಗಣಿಸುವುದು |
| ಸದಸ್ಯರ ಶಿಕ್ಷಣ | • ತರಬೇತಿ<br>• ಕಲಿಕಾ ಭೇಟಿಗಳು<br>• ಜಾಗೃತಿ ಸಭೆಗಳು |

ಮೇಲೆ ಸೂಚಿಸಿದಂತೆ, ರೈತ ಉತ್ಪಾದಕ ಸಂಸ್ಥೆಗಳು ತಮ್ಮ ಸದಸ್ಯರೊಂದಿಗೆ ವಿಭಿನ್ನ ರೀತಿಯಲ್ಲಿ ಸಂಬಂಧವನ್ನು ನಿರ್ವಹಿಸಬಹುದಾಗಿದೆ, ಈ ನಿಟ್ಟಿನಲ್ಲಿ ಸದಸ್ಯರ ಶಿಕ್ಷಣ, ಮಾಹಿತಿ ಮತ್ತು ಸಂವಹನ ಬಹಳ ಪರಿಣಾಮಕಾರಿಯಾಗಿವೆ. ಕಾಲಕಾಲಕ್ಕೆ ಸುಧಾರಿಸಲು ಬೇಕಾದ ಸೇವೆಗಳು, ಅಗತ್ಯಗಳು, ಗುಣಮಟ್ಟ ಇತ್ಯಾದಿಗಳ ಬಗ್ಗೆ ನಿಯಮಿತ ಪ್ರತಿಕ್ರಿಯೆಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಸದಸ್ಯರಿಗೆ ಅಗತ್ಯವಾದ ಸೌಲಭ್ಯಗಳನ್ನು ಖಚಿತಪಡಿಸಿಕೊಳ್ಳುವುದು ಸಹ ಮುಖ್ಯವಾಗಿದೆ.
ಉದಾಹರಣೆಗೆ – ಶೌಚಾಲಯ, ಕುಡಿಯುವ ನೀರು, ಆಸನದ ವ್ಯವಸ್ಥೆ ಇತ್ಯಾದಿ.

## ಕುಂದುಕೊರತೆಗಳ ಪರಿಹಾರದ ಕಾರ್ಯವಿಧಾನ:

ಸದಸ್ಯರಿಗೆ ಸಂಬಂಧಿಸಿದ ಯಾವುದೇ ಕುಂದುಕೊರತೆಗಳನ್ನು ವ್ಯವಸ್ಥಿತವಾಗಿ ಮತ್ತು ಸಮಯಕ್ಕೆ ಸರಿಯಾಗಿ ನಿರ್ವಹಿಸುವುದು ಮತ್ತು ವಿಲೇವಾರಿ ಮಾಡುವುದು ಅತ್ಯವಶ್ಯಕ. ಕುಂದುಕೊರತೆಗಳನ್ನು ನಿರ್ವಹಿಸಲು ರೈತ ಉತ್ಪಾದಕ ಸಂಸ್ಥೆಯು ಮಂಡಳಿಯ ಸದಸ್ಯರನ್ನು ನೇಮಕ ಮಾಡಬೇಕು. ಕುಂದುಕೊರತೆಗಳ ಸ್ವರೂಪದ ಆಧಾರದ ಮೇಲೆ ಏಕ ಸದಸ್ಯ ಅಥವಾ ಬಹು ಸದಸ್ಯರ ಸಮಿತಿಗಳನ್ನು ನೇಮಿಸಬಹುದು – ಆಡಳಿತಾತ್ಮಕ, ಹಣಕಾಸು ಇತ್ಯಾದಿ.

- ಸಮಿತಿಯ ಹೆಸರು ಮತ್ತು ಸಂಪರ್ಕಿಸ ಬೇಕಾಗಿರುವ ವ್ಯಕ್ತಿಯ ಹೆಸರನ್ನು ನೋಟಿಸ್ ಬೋರ್ಡ್ ಮತ್ತು ಕರಪತ್ರದಲ್ಲಿ ಸ್ಪಷ್ಟವಾಗಿ ಬರೆಯಬೇಕು.
- ಕುಂದುಕೊರತೆಗಳನ್ನು ಪರಿಹರಿಸುವ ಪ್ರಕ್ರಿಯೆ ಮತ್ತು ಅಂದಾಜು ಸಮಯವನ್ನು ಸಹ ತಿಳಿಸಬೇಕು;
- ಎಲ್ಲಾ ಕುಂದುಕೊರತೆಗಳನ್ನು ಸ್ಪಷ್ಟ ಉಲ್ಲೇಖದೊಂದಿಗೆ ಮೌಖಿಕ / ಲಿಖಿತರೂಪದಲ್ಲಿ ವ್ಯಕ್ತಿಯ ಹೆಸರು, ಕುಂದುಕೊರತೆ ಇತ್ಯಾದಿಗಳ ವಿವರಗಳೊಂದಿಗೆ ಸ್ವೀಕರಿಸಬೇಕು.
- ಹತ್ತಿರದ ಮಂಡಳಿಯ ಸಭೆಯಲ್ಲಿ ಕಾರ್ಯಸೂಚಿ ಕ್ರಮದಂತೆ ವಿಷಯವನ್ನು ಕೈಗೆತ್ತಿಕೊಳ್ಳಬೇಕು ಮತ್ತು ಅದನ್ನು ಪರಿಹರಿಸಬೇಕು.
- ಸಮಿತಿಯ ಸದಸ್ಯರು ಮಾರುವವರನ್ನು ಭೇಟಿಮಾಡುವುದರಿಂದ ವೈಯಕ್ತಿಕವಾಗಿ ಸಭೆ ಸೇರುವುದ–ರಿಂದ ಸಮಸ್ಯೆಯನ್ನು ಅರ್ಥಮಾಡಿಕೊಳ್ಳಲು ಮತ್ತು ಸ್ಪಷ್ಟಪಡಿಸಕೊಳ್ಳಲು ಸಹಾಯವಾಗುತ್ತದೆ.
- ತೆಗೆದುಕೊಂಡ ನಿರ್ಧಾರವನ್ನು ಲಿಖಿತವಾಗಿ ತಿಳಿಸುವುದು ಮತ್ತು ಸಭೆಯ ನಡಾವಳಿ ಪುಸ್ತಕದಲ್ಲಿ ಸರಿಯಾಗಿ ದಾಖಲಿಸುವುದು; ಮತ್ತು
- ನ್ಯಾಯಾಂಗ ವಿಷಯದ ಸಂದರ್ಭದಲ್ಲಿ, ಕಾನೂನು ಸಲಹೆಗಾರರ ಸಹಾಯದಿಂದ ಪ್ರಕರಣವನ್ನು ಹತ್ತಿರದ ನ್ಯಾಯಾಲಯಕ್ಕೆ ಕೊಂಡೊಯ್ಯಬೇಕು.



# 4

## ರೈತ ಉತ್ಪಾದಕ ಸಂಸ್ಥೆಯಲ್ಲಿ ಸದಸ್ಯತ್ವ – ಯಾರು? ಮತ್ತು ಹೇಗೆ?

**ಅಧಿವೇಶನದ ಉದ್ದೇಶ:**



ರೈತ ಉತ್ಪಾದಕ ಸಂಸ್ಥೆಗಳಲ್ಲಿ ಸದಸ್ಯತ್ವದ ಮಾನದಂಡಗಳನ್ನು ಅರ್ಥಮಾಡಿಕೊಳ್ಳುವುದು.
ರೈತ ಉತ್ಪಾದಕ ಸಂಸ್ಥೆಗಳಲ್ಲಿ ಸದಸ್ಯತ್ವವನ್ನು ಪಡೆದುಕೊಳ್ಳುವ ಕಾರ್ಯವಿಧಾನಗಳನ್ನು ಅರ್ಥಮಾಡಿಕೊಳ್ಳುವುದು.

**ಪ್ರಮುಖ ವಿಷಯಗಳು:**

1. ಸದಸ್ಯರನ್ನು ದಾಖಲಿಸುವುದು
2. ಸದಸ್ಯತ್ವದ ರದ್ದತಿ
3. ಸದಸ್ಯತ್ವದ ಅಂತ್ಯ

ನಮ್ಮ ರೈತ ಉತ್ಪಾದಕ ಸಂಸ್ಥೆಯ ಬೈಲಾಗಳಲ್ಲಿ /ಸಂಸ್ಥೆಯ ನಿಯಮಾವಳಿಗಳಲ್ಲಿ, ಸದಸ್ಯರ ಅರ್ಹತೆಗಳು ಮತ್ತು ಅನರ್ಹತೆಗೆ ಅನುಗುಣವಾಗಿ, ನಮ್ಮ ರೈತ ಉತ್ಪಾದಕ ಸಂಸ್ಥೆಯ ಸದಸ್ಯರನ್ನು ದಾಖಲಿಸುವ ಜವಾಬ್ದಾರಿಯನ್ನು ಹೊಂದಿದೆ.

**ಸದಸ್ಯತ್ವ ಪಡೆಯುವ ವಿಧಾನ:**

- ರೈತ ಉತ್ಪಾದಕ ಸಂಸ್ಥೆಯಲ್ಲಿ ಸದಸ್ಯತ್ವವನ್ನು ಪಡೆಯಲು ಸಿದ್ಧರಿರುವ ವ್ಯಕ್ತಿಯು ತಮ್ಮ ಅರ್ಜಿಯನ್ನು ರೈತ ಉತ್ಪಾದಕ ಸಂಸ್ಥೆಯ ಕಾರ್ಯದರ್ಶಿ / ಮುಖ್ಯನಿರ್ವಹಣಾಧಿಕಾರಿಗೆ ಸಲ್ಲಿಸುತ್ತಾರೆ ಮತ್ತು ಅವರು ಅದನ್ನು ಪರಿಗಣನೆಗೆ ನಿರ್ದೇಶಕರ ಮಂಡಳಿಯ ಮುಂದೆ ಮಂಡಿಸುತ್ತಾರೆ.
- ಸದಸ್ಯತ್ವಕ್ಕಾಗಿ ಅರ್ಜಿಯನ್ನು ಅರ್ಜಿ ಸಲ್ಲಿಸುವ ದಿನಾಂಕದಿಂದ 30 ದಿನಗಳೊಳಗೆ ಸಲ್ಲಿಸುವುದು ಮತ್ತು ನಿರ್ದೇಶಕರ ಮಂಡಳಿಯು ನಿರ್ಧಾರವನ್ನು ಕಾರಣಗಳೊಂದಿಗೆ ಅರ್ಜಿದಾರರಿಗೆ ತಿಳಿಸುವುದು.
- ಅರ್ಜಿದಾರನು ಪ್ರವೇಶ ಶುಲ್ಕವಾಗಿ ರೂ .______ ಮತ್ತು ಷೇರು ಬಂಡವಾಳವಾಗಿ ರೂ .______ ಮತ್ತು ಪ್ರವೇಶದ ಸಮಯದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಶುಲ್ಕಗಳನ್ನು ಪಾವತಿಸಬೇಕು.
- ರೈತ ಉತ್ಪಾದಕ ಸಂಸ್ಥೆಯು ಸದಸ್ಯರಿಂದ ಪಾವತಿಸಿದ ಷೇರು ಬಂಡವಾಳಕ್ಕಾಗಿ ರಶೀದಿ ಮತ್ತು ಬಾಂಡ್ ಅನ್ನು ಸದಸ್ಯರಿಗೆ ನೀಡುತ್ತದೆ ಮತ್ತು ಸದಸ್ಯತ್ವ ದಾಖಲೆಯನ್ನು ನವೀಕರಿಸುತ್ತದೆ.

ಈ ವಿಷಯದಲ್ಲಿ ನಿರ್ದೇಶಕರ ಮಂಡಳಿಯ ನಿರ್ಧಾರವು ಅಂತಿಮವಾಗಿರುತ್ತದೆ ಮತ್ತು ಕಾಯಿದೆ, ಬೈಲಾಗಳು, ವ್ಯವಹಾರ ಮತ್ತು ಆಡಳಿತದ ನಿಯಮಾವಳಿಗಳಿಗೆ ಒಳಪಟ್ಟಿರುತ್ತದೆ.

**ಸದಸ್ಯತ್ವವನ್ನು ರದ್ದುಗೊಳಿಸುವುದು:**

ಯಾವ ಸಂದರ್ಭಗಳಲ್ಲಿ ಸದಸ್ಯತ್ವವನ್ನು ನಿಲ್ಲಿಸಲಾಗುತ್ತದೆ?

- ಸದಸ್ಯತ್ವವನ್ನು ಹಿಂಪಡೆದ ಮೇಲೆ ರೈತ ಉತ್ಪಾದಕ ಸಂಸ್ಥೆಯ ನಿರ್ದೇಶಕರ ಮಂಡಳಿಯ ಅನುಮೋದನೆ ಮೇರೆಗೆ ಸದಸ್ಯತ್ವವನ್ನು ಹಿಂಪಡೆಯಲಾಗುತ್ತದೆ.
- ರೈತ ಉತ್ಪಾದಕ ಸಂಸ್ಥೆಯ ಬೈಲಾದಲ್ಲಿ ಉಲ್ಲೇಖಿಸಲಾದ ಯಾವುದೇ ಅನರ್ಹತೆಗಳನ್ನು ಹೊಂದಿದ್ದರೆ.
- ರೈತ ಉತ್ಪಾದಕ ಸಂಸ್ಥೆಯ ಯಾವುದೇ ವಹಿವಾಟು ಅಥವಾ ಸೇವೆಗಳಲ್ಲಿ ಸದಸ್ಯರು ಒಂದು ವರ್ಷದವರೆಗೂ ಭಾಗವಹಿಸದಿರದಿದ್ದರೆ.
- ರೈತ ಉತ್ಪಾದಕ ಸಂಸ್ಥೆಯ ಹಿತಾಸಕ್ತಿಗೆ ಹಾನಿಕಾರಕ ಚಟುವಟಿಕೆಗಳಲ್ಲಿ ಕೈಗೊಂಡಿದಲ್ಲಿ

ಅಂತಹ ಸದಸ್ಯತ್ವವನ್ನು ರದ್ದುಗೊಳಿಸಿದ ನಂತರ, ರೈತ ಉತ್ಪಾದಕ ಸಂಸ್ಥೆಯೊಂದಿಗಿನ ಸದಸ್ಯರ ಖಾತೆಯನ್ನು ರೈತ ಉತ್ಪಾದಕ ಸಂಸ್ಥೆಯ ನಿಯಮಗಳಿಗನುಸಾರವಾಗಿ ಇತ್ಯರ್ಥಪಡಿಸಲಾಗುತ್ತದೆ.



# 5

# ಬಂಡವಾಳ ಹೂಡಿಕೆ – ಸದಸ್ಯತ್ವವೇ ಮಾಲೀಕತ್ವ

## ಅಧಿವೇಶನದ ಉದ್ದೇಶ:



- ರೈತ ಉತ್ಪಾದಕ ಸಂಸ್ಥೆಗಳಲ್ಲಿ ಷೇರು ಬಂಡವಾಳದ ಅಗತ್ಯತೆಯ ಬಗ್ಗೆ ತಿಳುವಳಿಕೆಯನ್ನು ಪಡೆಯುವುದು
- ರೈತ ಉತ್ಪಾದಕ ಸಂಸ್ಥೆಗಳಲ್ಲಿ ಸದಸ್ಯರ ಆರ್ಥಿಕ ಪಾಲನ್ನು ಹೆಚ್ಚಿಸುವ ಮಹತ್ವವನ್ನು ಅರಿತುಕೊಳ್ಳುವುದು

**ಪ್ರಮುಖ ವಿಷಯಗಳು:**

1. ರೈತ ಉತ್ಪಾದಕ ಸಂಸ್ಥೆಗಳಲ್ಲಿ ಷೇರು ಬಂಡವಾಳ
2. ರೈತ ಉತ್ಪಾದಕ ಸಂಸ್ಥೆಗಳಲ್ಲಿನ ಸದಸ್ಯರ ಆರ್ಥಿಕ ಪಾಲಿನ ಮಹತ್ವ

## ಪರಿಚಯ

ಹಿಂದಿನ ಅಧಿವೇಶನದಲ್ಲಿ ತಿಳಿದಿರುವಂತೆ, ರೈತ ಉತ್ಪಾದಕ ಸಂಸ್ಥೆಗಳಲ್ಲಿ ಮಾಲೀಕತ್ವವನ್ನು ಕಾಯ್ದುಕೊಳ್ಳುವ ಪ್ರಮುಖ ಮಾರ್ಗವೆಂದರೆ ರೈತ ಉತ್ಪಾದಕ ಸಂಸ್ಥೆಗಳ ಬಂಡವಾಳಕ್ಕೆ ಸದಸ್ಯರ ಕೊಡುಗೆ. ರೈತ ಉತ್ಪಾದಕ ಸಂಸ್ಥೆಯು ನಿಜವಾದ ಸದಸ್ಯ ಸ್ವಾಮ್ಯದ ಸಂಸ್ಥೆಯಾಗಿರಬೇಕು ಮತ್ತು ಸುಸ್ಥಿರವಾಗಬೇಕಾದರೆ, ಅದರ ಸದಸ್ಯರಿಂದ ಗಮನಾರ್ಹ ಬಂಡವಾಳವನ್ನು ಹೊಂದಿರಬೇಕು. ಈ ಅಧಿವೇಶನದಲ್ಲಿ, ನಾವು ಸದಸ್ಯರ ಈ ಪ್ರಮುಖ ಕಾರ್ಯವನ್ನು ತಿಳಿಸುತ್ತೇವೆ.

## ಚರ್ಚೆಯ ಪ್ರಶ್ನೆಗಳು

1. ರೈತ ಉತ್ಪಾದಕ ಸಂಸ್ಥೆಯ ವ್ಯವಹಾರವನ್ನು ಪ್ರಾರಂಭಿಸಲು ಹಣದ ಮೂಲಗಳು ಯಾವುವು?
2. ಷೇರು ಬಂಡವಾಳವೆಂದರೇನು?



ರೈತ ಉತ್ಪಾದಕ ಸಂಸ್ಥೆಯ ವ್ಯವಹಾರಕ್ಕೆ ಬಂಡವಾಳದ ಅತ್ಯಗತ್ಯವಿದೆ ಮತ್ತು ಅವು ಮೂರು ಮುಖ್ಯ ಮೂಲಗಳಿಂದ ಬಂಡವಾಳವನ್ನು ಕ್ರೋಢೀಕರಿಸಬಹುದು:

1. ಸದಸ್ಯ – ಸದಸ್ಯರ ಷೇರು ಬಂಡವಾಳದ ಮೂಲಕ.
2. ರೈತ ಉತ್ಪಾದಕ ಸಂಸ್ಥೆಯ ವ್ಯವಹಾರದಿಂದ ಉತ್ಪತ್ತಿಯಾಗುವ ಹೆಚ್ಚುವರಿ ಮೊತ್ತದಿಂದ.
3. ಹೊರಗಿನವರಿಂದ ಧನಸಹಾಯ ಅಥವಾ ಸಾಲಗಳ ರೂಪದಲ್ಲಿ

ಸದಸ್ಯರ ಷೇರು ಬಂಡವಾಳವು ಎರಡು ಅಗತ್ಯ ಗುರಿಗಳನ್ನು ಹೊಂದಿದೆ: ಸದಸ್ಯರ ಷೇರುಗಳು ರೈತ ಉತ್ಪಾದಕ ಸಂಸ್ಥೆಗೆ ಸಾಕಷ್ಟು ಬಂಡವಾಳವನ್ನು ಒದಗಿಸುತ್ತದೆ ಮತ್ತು ಅವು ಮಾಲೀಕತ್ವದ ಪ್ರಜ್ಞೆಯನ್ನು ಸದಸ್ಯರಲ್ಲಿ ಸೃಷ್ಟಿಸುತ್ತವೆ.

ಸದಸ್ಯರ **ಷೇರು ಬಂಡವಾಳವು** ರೈತ ಉತ್ಪಾದಕ ಸಂಸ್ಥೆಗೆ ವೈಯಕ್ತಿಕ ಸದಸ್ಯರ ಬದ್ಧತೆಯನ್ನು ಪ್ರತಿನಿಧಿಸುತ್ತದೆ. ಇದು ವೈಯಕ್ತಿಕ ಸದಸ್ಯನ ಹಣಕಾಸಿನ ಪಾಲನ್ನು ಸಹ ಗುರುತಿಸುತ್ತದೆ. ಸದಸ್ಯರು ರೈತ ಉತ್ಪಾದಕ ಸಂಸ್ಥೆಯನ್ನು ತೊರೆದಾಗ ಮಾತ್ರ ಅದನ್ನು ಹಿಂಪಡೆಯಲಾಗುತ್ತದೆ.

**"ರೈತ ಉತ್ಪಾದಕ ಸಂಸ್ಥೆಯಗಳು ಅದರ ಸದಸ್ಯರಿಂದ ಷೇರು ಬಂಡವಾಳವನ್ನು ಏಕೆ ಸಂಗ್ರಹಿಸುತ್ತವೆ?"**

ಷೇರು ಬಂಡವಾಳವು ಮಾಲೀಕತ್ವ ನಾಣ್ಯದ ಒಂದು ಬದಿಯಾದರೆ, ಸದಸ್ಯರ ಪ್ರಯೋಜನಗಳು ನಾಣ್ಯದ ಇನ್ನೊಂದು ಬದಿ. ಮಾಲೀಕರು ತಮ್ಮ ಇಕ್ವಿಟಿ ಹೂಡಿಕೆಗಳೊಂದಿಗೆ ವ್ಯವಹಾರಕ್ಕೆ ಸ್ಪಷ್ಟವಾದ ಬೆಂಬಲವನ್ನು ನೀಡುತ್ತಾರೆ ಮತ್ತು ಪ್ರತಿಯಾಗಿ ಸಂಸ್ಥೆಯು ಸದಸ್ಯ–ಮಾಲೀಕರಿಗೆ ಪ್ರಯೋಜನಗಳನ್ನು ಒದಗಿಸುತ್ತದೆ. ಸದಸ್ಯರಿಗೆ ಅತ್ಯಂತ ಮುಖ್ಯವಾದ ಪ್ರಯೋಜನವೆಂದರೆ ರೈತ ಉತ್ಪಾದಕ ಸಂಸ್ಥೆಯ ಅಸ್ತಿತ್ವವೆ ಆಗಿದೆ. ಜನರು ರೈತ ಉತ್ಪಾದಕ ಸಂಸ್ಥೆಯಲ್ಲಿ ಹೂಡಿಕೆ ಮಾಡಿರುವುದರಿಂದ ಅವರು ಅದರ ಸೇವೆಗಳನ್ನು ಬಳಸಲು ಬಯಸುತ್ತಾರೆ. ಹೆಚ್ಚುವರಿಯಾಗಿ, ಸದಸ್ಯರು ಸಮುದಾಯದ ಭಾಗವಾಗಿರುವುದರಿಂದ ಪ್ರಯೋಜನವನ್ನು ಪಡೆಯುತ್ತಾರೆ, ಹಾಗೂ ರೈತ ಉತ್ಪಾದಕ ಸಂಸ್ಥೆಯನ್ನು ಬೆಂಬಲಿಸುವ ಮುಖಾಂತರ ಸಮುದಾಯವನ್ನು ಬೆಂಬಲಿಸುತ್ತಾರೆ.

**ಚರ್ಚೆಯ ಪ್ರಶ್ನೆ: ಯಾವ ರೀತಿಯ ನಿಧಿಗಳು ಉತ್ತಮವಾಗಿರುತ್ತವೆ?**

ಸಮುದಾಯ ಆಧಾರಿತ ವ್ಯವಹಾರಗಳ ಅನುಕೂಲವನ್ನು ರೈತ ಉತ್ಪಾದಕ ಸಂಸ್ಥೆಯು ತೋರಿಸುತ್ತದೆ, ಅಲ್ಲಿ ಹೆಚ್ಚಿನ ಸಂಖ್ಯೆಯ ಜನರಿಂದ ತುಲನಾತ್ಮಕವಾಗಿ ಕಡಿಮೆ ಪ್ರಮಾಣದ ಹೂಡಿಕೆಯು ಸಾಕಷ್ಟು ಪ್ರಮಾಣದ ಬಂಡವಾಳವನ್ನು ರಚಿಸಬಹುದಾಗಿದೆ, ಇದರಿಂದ ಹೆಚ್ಚಿನ ಪ್ರಮಾಣದ ಬಂಡವಾಳವನ್ನು ಕ್ರೋಢೀಕರಿಸಲು ಸಾಧ್ಯವಿರುತ್ತದೆ. ವಿಶೇಷವಾಗಿ ತಮ್ಮ ವ್ಯವಹಾರವನ್ನು ವೃದ್ಧಿಸಲು ಬಯಸುವ ರೈತ ಉತ್ಪಾದಕ ಸಂಸ್ಥೆಗಳಿಗೆ ಸದಸ್ಯರ ಷೇರುಗಳು ಸೀಮಿತವಾಗಬಹುದು ಮತ್ತು ಸಂಗ್ರಹವಾಗಲು ನಿಧಾನವಾಗಬಹುದಾಗಿದೆ.

ಷೇರು ಹೂಡಿಕೆಗಳು ಬ್ಯಾಂಕುಗಳು ಮತ್ತು ಇತರ ಸಾಲುದಾರರಿಗೆ ಸದಸ್ಯ–ಮಾಲೀಕರ ಬದ್ಧತೆಯನ್ನು ತೋರಿಸುತ್ತವೆ. ಆದಾಗ್ಯೂ, ಬಂಡವಾಳದ ಪ್ರಕಾರ ಮತ್ತು ಮೂಲವು ಮುಖ್ಯವಾಗುತ್ತದೆ. ಏಕೆಂದರೆ ಅವುಗಳು ನಿಯಮಗಳು ಮತ್ತು ಷರತ್ತುಗಳನ್ನು ನಿರ್ಧರಿಸುತ್ತವೆ.

## ಒಂದು ಪ್ರಕರಣದ ಅಧ್ಯಯನ

ಧರಣಿ ರೈತ ಉತ್ಪಾದಕ ಸಂಸ್ಥೆಯ ಕಮಲಾಪುರ ಬ್ಲಾಕ್‌ನ ರೈತರೊಂದಿಗೆ ಕೆಲಸ ಮಾಡುತ್ತಿದೆ. ಇದನ್ನು ಸಹಕಾರಿ ಕಾಯ್ದೆಯಡಿ ನೋಂದಾಯಿಸಲಾಗಿದೆ. ಸೇವೆಗಳನ್ನು ಬಳಸಲು ಸಿದ್ಧರಿರುವ ರೈತರು ಮತ್ತು ರೈತ ಉತ್ಪಾದಕ ಸಂಸ್ಥೆಯು ನಿಗದಿಪಡಿಸಿದ ಬೈಲಾಗಳು ಮತ್ತು ಇತರ ಷರತ್ತುಗಳಿಗೆ ಬದ್ಧರಾಗಿರುತ್ತಾರೆ, ಷೇರು ಬಂಡವಾಳ ಮತ್ತು ಪ್ರವೇಶ ಶುಲ್ಕವನ್ನು ಪಾವತಿಸಿ ಸದಸ್ಯರಾಗಿದ್ದಾರೆ. ಈ ರೈತ ಉತ್ಪಾದಕ ಸಂಸ್ಥೆಯು ಅದರ ಸದಸ್ಯರಿಂದ ಮತ್ತು ಸದಸ್ಯರಲ್ಲದವರಿಂದ ಉತ್ಪನ್ನಗಳನ್ನು ಸಂಗ್ರಹಿಸುತ್ತದೆ. ಆದಾಗ್ಯೂ, ರೈತ ಉತ್ಪಾದಕ ಸಂಸ್ಥೆಯು ತನ್ನ ವ್ಯವಹಾರ ನಿಯಮಗಳ ಪ್ರಕಾರ, ಸದಸ್ಯರಲ್ಲದವರಿಂದ ಒಟ್ಟು ಸಂಗ್ರಹದ ಶೇಕಡಾ 20 ಮೀರದಂತೆ ಸಂಗ್ರಹವನ್ನು ಖಾತ್ರಿಪಡಿಸುತ್ತಿದೆ.

ಸದಸ್ಯರಿಂದ ಒಂದು ಸೀಮಿತವಾದ ಷೇರು ಬಂಡವಾಳವನ್ನು ಕ್ರೋಢೀಕರಿಸಬಹುದು ಮತ್ತು ಸಂಗ್ರಹಿಸಲು ನಿಧಾನವಾಗಿರುತ್ತವೆ ಎಂದು ರೈತ ಉತ್ಪಾದಕ ಸಂಸ್ಥೆಯು ಅರಿತುಕೊಂಡಿದೆ, ಆದ್ದರಿಂದ, ರೈತ ಉತ್ಪಾದಕ ಸಂಸ್ಥೆಯು ತಮ್ಮ ಚಟುವಟಿಕೆಗಳನ್ನು ತೀವ್ರಗೊಳಿಸಲು ಬ್ಯಾಂಕುಗಳು ಮತ್ತು ಇತರ ಅಭಿವೃದ್ಧಿ ಸಂಸ್ಥೆಗಳಿಂದ ಸಾಲಗಳನ್ನು ಪಡೆಯಲು ಯತ್ನಿಸುತ್ತಿದೆ.

ಮೂರು ವರ್ಷಗಳಿಂದ ನಂತರ, ರೈತ ಉತ್ಪಾದಕ ಸಂಸ್ಥೆಯ ಜೊತೆ ಸದಸ್ಯರು ಮಾಡಿದ ವಹಿವಾಟಿನ ಆಧಾರದ ಮೇಲೆ ರೈತ ಉತ್ಪಾದಕ ಸಂಸ್ಥೆಯ ಸಾಮಾನ್ಯ ಸಭೆಯು ಶೇಕಡಾ 40 ರಷ್ಟು ಲಾಭಾಂಶವನ್ನು ಹಂಚಿಕೊಳ್ಳುತ್ತಿದ್ದಾರೆ. ನಿರ್ಧರಿಸಿತು. ಸದಸ್ಯರು ರೈತ ಉತ್ಪಾದಕ ಸಂಸ್ಥೆಗೆ ತಮ್ಮ ಉತ್ಪಾದನೆಯ ಸಂಗ್ರಹಣೆಯಿಂದ ಹೆಚ್ಚು ಲಾಭದಾಯಕವಿಲ್ಲದಿರುವ ಕಾರಣ ಅವರು ರೈತ ಉತ್ಪಾದಕ ಸಂಸ್ಥೆಯನ್ನು ಪೂರ್ಣವಾಗಿ ನಂಬುತ್ತಾರೆ ಎಂದು ಹೇಳುತ್ತಾರೆ, ಏಕೆಂದರೆ ಆ ವಹಿವಾಟುಗಳಿಗೆ ಅನುಗುಣವಾಗಿ ಹೆಚ್ಚುವರಿ ಹಣವನ್ನು ಹಿಂತಿರುಗಿಸಲಾಗುತ್ತದೆ. ರೈತ ಉತ್ಪಾದಕ ಸಂಸ್ಥೆಯ ಮಂಡಳಿಯು ಅವರು ಪ್ರೋತ್ಸಾಹಕ ಲಾಭಾಂಶ ಮರುಪಾವತಿಗೆ ಗಮನ ಕೊಡುತ್ತಾರೆ ಏಕೆಂದರೆ ಅಂತಹ ಮರುಪಾವತಿಗಳು ಸಹಕಾರಿ ಸಂಸ್ಥೆಗಳಿಗೆ ನಿವ್ವಳ ಆದಾಯವನ್ನು ಗಳಿಸಲು ಸೂಕ್ತವಾದ ಒತ್ತಡವನ್ನು ಉಂಟುಮಾಡಬಹುದು, ಇದು ಆರೋಗ್ಯಕರ ವ್ಯವಹಾರದ ಒಂದು ಸಂಕೇತವಾಗಿದೆ.

**ಈ ಕೆಳಗಿನ ಜಾಗವನ್ನು ಬಳಸಿ ಸದಸ್ಯರಿಂದ ಷೇರು ಬಂಡವಾಳವನ್ನು ಸಂಗ್ರಹಿಸುವ ಪ್ರಯೋಜನಗಳನ್ನು ಪ್ರತಿಬಿಂಬಿಸಿ.**

## ಸದಸ್ಯರ ಹಣಕಾಸಿನ ಪಾಲುದಾರಿಕೆ

ಈಗ ನಾವು ಎರಡು ರೈತ ಉತ್ಪಾದಕ ಸಂಸ್ಥೆಗಳ ಅನುಸರಣೆಗಳನ್ನು ನೋಡುತ್ತೇವೆ ಮತ್ತು ಸದಸ್ಯರ ಪಾಲು, ಮಾಲೀಕತ್ವ ಮತ್ತು ರೈತ ಉತ್ಪಾದಕ ಸಂಸ್ಥೆಗಳ ಸುಸ್ಥಿರತೆಯ ನಡುವಿನ ಸಂಬಂಧವನ್ನು ವಿಶ್ಲೇಷಿಸಲು ಪ್ರಯತ್ನಿಸುತ್ತೇವೆ:

**ರೈತ ಉತ್ಪಾದಕ ಸಂಸ್ಥೆಯ 1:** ಈ ರೈತ ಉತ್ಪಾದಕ ಸಂಸ್ಥೆಯ ಕಾರ್ಯಾಚರಣೆಯ ಪ್ರದೇಶದ ಎಲ್ಲ ಸಂಭಾವ್ಯ ಸದಸ್ಯರು ಪೂರ್ಣ ಅಧಿಕೃತ ಷೇರು ಬಂಡವಾಳವನ್ನು ಪಾವತಿಸುವ ಮೂಲ ರೈತ ಉತ್ಪಾದಕ ಸಂಸ್ಥೆಯ ಸದಸ್ಯರಾಗಿದ್ದಾರೆ. ಸದಸ್ಯರು ರೈತ ಉತ್ಪಾದಕ ಸಂಸ್ಥೆಯ ಜೊತೆ ನಿಯಮಿತವಾಗಿ ಮಾಸಿಕ ಉಳಿತಾಯವನ್ನೂ ಮಾಡುತ್ತಾರೆ. ಕೃಷಿ ಪರಿಕರಗಳು ಮತ್ತು ಸಂಬಂಧಿತ ವೆಚ್ಚಗಳಿಗಾಗಿ, ರೈತ ಉತ್ಪಾದಕ ಸಂಸ್ಥೆಯ ಸದಸ್ಯರಿಂದ ಠೇವಣಿಗಳನ್ನು ಒಟ್ಟುಗೂಡಿಸುವ ಮೂಲಕ ಸದಸ್ಯರಿಗೆ ಸಾಲವನ್ನು ಒದಗಿಸುತ್ತದೆ ಮತ್ತು ಅಗತ್ಯವಿದ್ದರೆ ಸದಸ್ಯರು ತಮ್ಮ ಠೇವಣಿ ಮೊತ್ತದಲ್ಲಿ 10 ಪಟ್ಟು ಸಾಲ ಸೌಲಭ್ಯವನ್ನು ಪಡೆಯಬಹುದು. ಉತ್ಪನ್ನಗಳ ಖರೀದಿಯ ಸಮಯದಲ್ಲಿ, ರೈತ ಉತ್ಪಾದಕ ಸಂಸ್ಥೆಯು ಸಹ ಸದಸ್ಯರಿಗೆ ಶೇಕಡಾ 10 ರಷ್ಟು ಬೆಲೆಯನ್ನು ಕಡಿತಗೊಳಿಸಿ ವ್ಯವಹಾರ ಚಕ್ರವನ್ನು ಪೂರ್ಣಗೊಳಿಸಿದ ನಂತರ ಸದಸ್ಯರಿಗೆ ಹಿಂದಿರುಗಿಸಲಾಗುತ್ತದೆ.

**ರೈತ ಉತ್ಪಾದಕ ಸಂಸ್ಥೆಯ 2:** ರೈತರು ರೈತ ಉತ್ಪಾದಕ ಸಂಸ್ಥೆಗೆ ಸೇರಿ, ಅಧಿಕೃತ ಷೇರು ಬಂಡವಾಳದ ಒಂದು ಸಣ್ಣ ಭಾಗವನ್ನು ಮಾತ್ರ ಸಂಸ್ಥೆಗೆ ನೀಡಿದರು. ರೈತ ಉತ್ಪಾದಕ ಸಂಸ್ಥೆಯು ತನ್ನ ಸದಸ್ಯರಿಗೆ ಯಾವುದೇ ಉಳಿತಾಯ ಮತ್ತು ಸಾಲದ ಸೇವೆಗಳನ್ನು ನೀಡುತ್ತಿಲ್ಲ. ಆದ್ದರಿಂದ ಮಾರುಕಟ್ಟೆ ಬಡ್ಡಿದರದಲ್ಲಿ ಅಭಿವೃದ್ಧಿ ಹಣಕಾಸು ಸಂಸ್ಥೆಗಳಿಂದ ರೈತ ಉತ್ಪಾದಕ ಸಂಸ್ಥೆಯು ಹಣವನ್ನು ಸಾಲ ಪಡೆಯುತ್ತದೆ. ಆದಾಗ್ಯೂ, ರೈತ ಉತ್ಪಾದಕ ಸಂಸ್ಥೆಯ ವ್ಯವಹಾರಕ್ಕೆ ಇದು ಸಾಕಾಗುವುದಿಲ್ಲ. ಆದ್ದರಿಂದ, ಉತ್ತೇಜಿಸುವ ಸಂಸ್ಥೆಯು ರೈತ ಉತ್ಪಾದಕ ಸಂಸ್ಥೆಗೆ ಬಡ್ಡಿರಹಿತ ಸಾಲವನ್ನು ನೀಡಿತು. ರೈತ ಉತ್ಪಾದಕ ಸಂಸ್ಥೆಯ ಮಟ್ಟದಲ್ಲಿ ಹಣದ ಸರಿಯಾದ ನಿರ್ವಹಣೆಗಾಗಿ, ಹಣಕಾಸು ಸಂಸ್ಥೆಗಳು ಮುಕ್ತ ಮಾರುಕಟ್ಟೆಯಿಂದ ಮುಖ್ಯನಿರ್ವಹಣಾಧಿಕಾರಿಯನ್ನು (ಸಿಇಒ) ನೇಮಿಸಿಕೊಳ್ಳಲು ರೈತ ಉತ್ಪಾದಕ ಸಂಸ್ಥೆಗೆ ಸೂಚಿಸಿದವು. ರೈತ ಉತ್ಪಾದಕ ಸಂಸ್ಥೆಯು ಆರ್ಥಿಕ ಸುಸ್ಥಿರತೆಯನ್ನು ಖಚಿತಪಡಿಸಿಕೊಳ್ಳಲು, ಉತ್ತೇಜಿಸುವ ಏಜೆನ್ಸಿಯು ಸಂಸ್ಥೆಯ ಸಿಬ್ಬಂದಿಗೆ ಸಂಬಳ ನೀಡುತ್ತದೆ.

ಸದಸ್ಯರ ಹಣಕಾಸಿನ ಪಾಲುದಾರಿಕೆ ಮಾಲೀಕತ್ವ, ನಿಯಂತ್ರಣ ಮತ್ತು ಸಂಸ್ಥೆಗಳ ಸುಸ್ಥಿರತೆಯ ಮೇಲೆ ಪ್ರಭಾವದ ದೃಷ್ಟಿಯಿಂದ ಈ ಮೇಲಿನ ಎರಡು ರೈತ ಉತ್ಪಾದಕ ಸಂಸ್ಥೆಗಳ ಸ್ಥಿತಿಯನ್ನು ವಿಶ್ಲೇಷಿಸಿ, ಕೆಳಗೆ ಸೂಚಿಸಿದ ಜಾಗವನ್ನು ಬಳಸಿ ನಿಮ್ಮ ಅನಿಸಿಕೆಗಳನ್ನು ಬರೆಯಿರಿ:


| ರೈತ ಉತ್ಪಾದಕ ಸಂಸ್ಥೆಯ 1 | ರೈತ ಉತ್ಪಾದಕ ಸಂಸ್ಥೆಯ 2 |
|---|---|
| | |

ಮೇಲಿನ ಪ್ರಕರಣಗಳಿಂದ, ರೈತ ಉತ್ಪಾದಕ ಸಂಸ್ಥೆಗಳ ಮಾಲೀಕತ್ವ ಮತ್ತು ಸುಸ್ಥಿರತೆಯನ್ನು ಖಾತ್ರಿಪಡಿಸುವಲ್ಲಿ ಸದಸ್ಯರ ಹೆಚ್ಚಿನ ಹಣಕಾಸಿನ ಪಾಲು ಬಹಳ ನಿರ್ಣಾಯಕವಾಗಿದೆ ಎಂಬುದನ್ನು ಅರಿತುಕೊಳ್ಳಬಹುದು. ಕನಿಷ್ಠ ಆಂತರಿಕ ಬಂಡವಾಳವಿಲ್ಲದೆ, ಬಾಹ್ಯ ಬಂಡವಾಳವನ್ನು ಆಕರ್ಷಿಸಲು ಸಾಧ್ಯವಿಲ್ಲ. ಅದೇರೀತಿ ಗಮನಾರ್ಹವಾದ ಆಂತರಿಕ ಬಂಡವಾಳವಿಲ್ಲದೆ, ಆಂತರಿಕ ಮಾಲೀಕತ್ವ ಕೂಡ ಇರುವುದಿಲ್ಲ ಮತ್ತು ಅಂತಹ ರೈತ ಉತ್ಪಾದಕ ಸಂಸ್ಥೆಗಳನ್ನು ಹೆಚ್ಚಾಗಿ ಬಾಹ್ಯ ಏಜೆನ್ಸಿಗಳು ನಿಯಂತ್ರಿಸುತ್ತವೆ.

ಸಂಸ್ಥೆಯಲ್ಲಿ ಗಮನಾರ್ಹ ಸದಸ್ಯರ ಹಣಕಾಸಿನ ಪಾಲು ಇದ್ದರೆ, ರೈತ ಉತ್ಪಾದಕ ಸಂಸ್ಥೆಯ ನಿರ್ಧಾರ ಮತ್ತು ಇತರ ಚಟುವಟಿಕೆಗಳಲ್ಲಿ ಅಗತ್ಯವಾದ ಮಾಲೀಕತ್ವ ಮತ್ತು ಸದಸ್ಯರ ಭಾಗವಹಿಸುವಿಕೆ ಸಕ್ರಿಯವಾಗಿರುತ್ತದೆ.

ಸದಸ್ಯರು ರೈತ ಉತ್ಪಾದಕ ಸಂಸ್ಥೆಗಳಲ್ಲಿ ಹಣಕಾಸಿನ ಪಾಲನ್ನು ಹೊಂದಿರುವ ವಿಧಾನಗಳು ಈ ಕೆಳಗಿನಂತಿವೆ.

- ಷೇರು ಬಂಡವಾಳ
- ಠೇವಣಿ
- ಸಾಲಗಳು
- ಬಂಡವಾಳದ ಅವಶ್ಯಕತೆಗಳಿಗೆ ಕೊಡುಗೆ
- ಉಳಿತಾಯ
- ತಡೆಹಿಡಿಯಲಾದ ಬೆಲೆ



# ಅನುಬಂಧ 1

## ಸಹಕಾರಿ ಸಂಘಗಳ ಕಾಯ್ದೆಯ ಪ್ರಕಾರ ಸದಸ್ಯತ್ವ ನಿಬಂಧನೆಗಳು

"ಸದಸ್ಯ" ಎಂದರೆ ರೈತ ಉತ್ಪಾದಕ ಸಂಸ್ಥೆಯ ಬೈಲಾಗಳಲ್ಲಿ ನಿರ್ದಿಷ್ಟಪಡಿಸಿದಂತೆ ಸದಸ್ಯತ್ವದ ಅರ್ಹತಾ ಮಾನದಂಡಗಳನ್ನು ಪೂರೈಸುವ ಮತ್ತು ಷೇರು ಬಂಡವಾಳವನ್ನು ಪಾವತಿಸಿದ ಒಬ್ಬ ವೈಯಕ್ತಿಕ ಉತ್ಪಾದಕ ಅಥವಾ ಉತ್ಪಾದಕ ಉದ್ಯಮ.

1. ಬೈಲಾಗಳಿಗೆ ಒಳಪಟ್ಟು, ಸಹಕಾರಿ ಸಂಸ್ಥೆಯ ಸೇವೆಗಳನ್ನು ಬಳಸಿಕೊಳ್ಳಲು ಬಯಸುವ ಯಾವುದೇ ವ್ಯಕ್ತಿಯು ಸದಸ್ಯತ್ವದ ಜವಾಬ್ದಾರಿಗಳನ್ನು ಸ್ವೀಕರಿಸಲು ಮತ್ತು ಸಹಕಾರಿ ಸಂಸ್ಥೆಯ ಬೈಲಾಗಳಲ್ಲಿ ನಿರ್ದಿಷ್ಟಪಡಿಸಿದಂತಹ ಇತರ ಷರತ್ತುಗಳನ್ನು ಪೂರೈಸಲು ಇಚ್ಛಿಸಿದಲ್ಲಿ ಅವರನ್ನು ಸದಸ್ಯರನ್ನಾಗಿ ಸೇರಿಸಿಕೊಳ್ಳಬಹುದು, ಆದರೆ ಸದಸ್ಯತ್ವವು ಸಹಕಾರಿ ಸಂಸ್ಥೆಯು ತನ್ನ ಸೇವೆಗಳನ್ನು ಅರ್ಜಿದಾರರಿಗೆ ವಿಸ್ತರಿಸುವ ಸ್ಥಿತಿಯಲ್ಲಿ ಇರಬೇಕು ಮತ್ತು ಅರ್ಜಿದಾರನು ಈಗಾಗಲೇ ಈ ಕಾಯಿದೆಯಡಿ ಅಂತಹುದೇ ಸೇವೆಗಳನ್ನು ಒದಗಿಸುವ ಸಹಕಾರಿ ಸಂಸ್ಥೆಯ ಸದಸ್ಯನಾಗಿಲ್ಲ ಎಂಬ ಷರತ್ತಿಗೆ ಒಳಪಟ್ಟಿರುತ್ತದೆ.

2. ಚುನಾಯಿತ ಮಂಡಳಿಯಿಂದ ಅಥವಾ ಅಂತಹ ಚುನಾಯಿತ ಮಂಡಳಿಯು ಸದ್ಯಕ್ಕೆ ಅಸ್ತಿತ್ವದಲ್ಲಿ ಇಲ್ಲದಿದ್ದಲ್ಲಿ ಸಾಮಾನ್ಯ ಸಭೆಯಲ್ಲಿ ಬೈಲಾಗಳಲ್ಲಿ ನಿರ್ದಿಷ್ಟಪಡಿಸಿದ ಕಾರ್ಯವಿಧಾನಕ್ಕೆ ಅನುಗುಣವಾಗಿ ಮಾತ್ರ ಸದಸ್ಯರ ದಾಖಲಾತಿ ಮತ್ತು ಸದಸ್ಯತ್ವದಿಂದ ತೆಗೆದುಹಾಕುವಿಕೆಯನ್ನು ಮಾಡಲಾಗುತ್ತದೆ.

3. ಬೈಲಾಗಳಲ್ಲಿ ಕಾಲಕಾಲಕ್ಕೆ ವಿಧಿಸಬಹುದಾದ ಷರತ್ತುಗಳನ್ನು ಪೂರೈಸಿದ ನಂತರ ಮಾತ್ರವೇ ಸದಸ್ಯರಾಗಿ ಪ್ರವೇಶ ಪಡೆದ ವ್ಯಕ್ತಿಯು ಮತದಾನದ ಹಕ್ಕನ್ನು ಒಳಗೊಂಡಂತೆ ಇತರೆ ಸದಸ್ಯತ್ವದ ಹಕ್ಕುಗಳನ್ನು ಚಲಾಯಿಸಬಹುದು; ಮತದಾನದ ಹಕ್ಕನ್ನು ಚಲಾಯಿಸಲು ಅರ್ಹತೆ ಪಡೆಯುವ ಮೊದಲು ಒಬ್ಬ ವ್ಯಕ್ತಿಯು ಕನಿಷ್ಠ ಒಂದು ವರ್ಷ ಸದಸ್ಯನಾಗಿರಬೇಕು; ಇದು ಸಹಕಾರಿ ಸಂಘದ ನೋಂದಣಿಯ ಮೊದಲ ವರ್ಷದಲ್ಲಿ ಪ್ರವರ್ತಕ ಸದಸ್ಯರಿಗೆ ಮೇಲಿನ ನಿಬಂಧನೆಯು ಅನ್ವಯಿಸುವುದಿಲ್ಲ.

4. ಕಾಯಿದೆಯು ಒಬ್ಬ ವ್ಯಕ್ತಿಯು ಒಂದೇ ಸೇವೆಗೆ ಒಂದಕ್ಕಿಂತ ಹೆಚ್ಚು ಸಹಕಾರಿ ಸಂಸ್ಥೆಯ ಸದಸ್ಯರಾಗಿರಬಾರದೆಂದು ನಿರೀಕ್ಷಿಸುತ್ತದೆ.

# ಅನುಬಂಧ 2

## ಕಂಪನಿಗಳ ಕಾಯ್ದೆ 2013 ರ ಪ್ರಕಾರ ಸದಸ್ಯತ್ವ ನಿಬಂಧನೆಗಳು

**ಸದಸ್ಯರ ಹಕ್ಕುಗಳು**

ಒಬ್ಬ ವ್ಯಕ್ತಿಯು ಒಮ್ಮೆ ಸದಸ್ಯನಾದಾಗ ಅವನು / ಅವಳು ಕಾಯಿದೆಯ ನಿಬಂಧನೆಗಳಿಗೆ ಅನುಗುಣವಾಗಿ ಸದಸ್ಯನಾಗುವುದನ್ನು ನಿಲ್ಲಿಸುವವರೆಗೆ ಸದಸ್ಯನ ಎಲ್ಲಾ ಹಕ್ಕುಗಳನ್ನು ಚಲಾಯಿಸಲು ಅರ್ಹನಾಗಿರುತ್ತಾನೆ. ಸದಸ್ಯರ ಹಕ್ಕುಗಳು ಯಾವುವೆಂದರೆ:

- ತನ್ನ ಷೇರುಗಳನ್ನು ವರ್ಗಾಯಿಸಲು;
- ಕಂಪನಿಯ ಸಭೆಗಳಲ್ಲಿ ನಿರ್ಣಯಗಳ ಮೇಲೆ ಮತ ಚಲಾಯಿಸುವುದು;
- ಕಂಪನಿಯ ಅಸಾಧಾರಣ ಸಾಮಾನ್ಯ ಸಭೆಯನ್ನು ಕರೆಯಲು ವಿನಂತಿಸಲು ಅಥವಾ ಜಂಟಿ ವಿನಂತಿಸಲು;
- ಸಾಮಾನ್ಯ ಸಭೆಯ ಸೂಚನಾ ಪತ್ರವನ್ನು ಸ್ವೀಕರಿಸಲು;
- ಸಾಮಾನ್ಯ ಸಭೆಯಲ್ಲಿ ಭಾಗವಹಿಸಲು ಮತ್ತು ಮಾತನಾಡಲು;
- ಸಭೆಗಳಲ್ಲಿ ಪ್ರಸ್ತಾಪಿಸಲಾದ ನಿರ್ಣಯಗಳಿಗೆ ತಿದ್ದುಪಡಿಗಳನ್ನು ಮಂಡಿಸಲು;
- ಒಂದು ವೇಳೆ ಸದಸ್ಯನು ಸಾಂಸ್ಥಿಕ ಸಂಸ್ಥೆಯಾಗಿದ್ದರೆ, ಅದರ ಪರವಾಗಿ ಸಾಮಾನ್ಯ ಸಭೆಗಳಲ್ಲಿ ಭಾಗವಹಿಸಲು ಮತ್ತು ಮತ ಚಲಾಯಿಸಲು ಪ್ರತಿನಿಧಿಯನ್ನು ನೇಮಿಸಲು;
- ಕಂಪನಿಯು ತನ್ನ ನಿರ್ಣಯಗಳನ್ನು ಸ್ವೀಕರಿಸಲು;
- ಕಂಪನಿಯು ನೀಡುವ ಲಾಭಾಂಶವನ್ನು ಪಡೆಯಲು;
- ನಿರ್ದೇಶಕರನ್ನು ಆಯ್ಕೆ ಮಾಡಲು ಮತ್ತು ಅವರ ಮೂಲಕ ಕಂಪನಿಯ ನಿರ್ವಹಣೆಯಲ್ಲಿ ಭಾಗವಹಿಸಲು;
- ದಬ್ಬಾಳಿಕೆಯ ಸಂದರ್ಭದಲ್ಲಿ ಪರಿಹಾರಕ್ಕಾಗಿ ಕಂಪನಿ ಕಾನೂನು ಮಂಡಳಿಗೆ ಅರ್ಜಿ ಸಲ್ಲಿಸಲು;
- ನಿರ್ವಹಣೆಯಲ್ಲಿ ಲೋಪವಾದ ಸಂದರ್ಭದಲ್ಲಿ ಪರಿಹಾರಕ್ಕಾಗಿ ಕಂಪನಿ ಕಾನೂನು ಮಂಡಳಿಗೆ ಅರ್ಜಿ ಸಲ್ಲಿಸಲು;
- ಕಂಪನಿಯನ್ನು ಮುಚ್ಚಬೇಕಾದ ಸಂದರ್ಭದಲ್ಲಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಲು;
- ಕಂಪನಿಯನ್ನು ಮುಚ್ಚಬೇಕಾದ ಸಂದರ್ಭದಲ್ಲಿ ಹೆಚ್ಚುವರಿ ಮೊತ್ತವನ್ನು ಹಂಚಿಕೊಳ್ಳಲು; ಮತ್ತು
- ಸದಸ್ಯರ ಷೇರುಗಳಿಗೆ ಸಂಬಂಧಿಸಿದಂತೆ ಷೇರು ಪ್ರಮಾಣಪತ್ರವನ್ನು ಪಡೆಯಲು.

## ಸದಸ್ಯರ ಮತದಾನದ ಹಕ್ಕುಗಳು

1) ಸದಸ್ಯತ್ವವು ಒಬ್ಬ ವೈಯಕ್ತಿಕ ಸದಸ್ಯರನ್ನು ಮಾತ್ರ ಒಳಗೊಂಡಿರುವ ಸಂದರ್ಭದಲ್ಲಿ, ಅವನು / ಅವಳು ಸಂಸ್ಥೆಯಲ್ಲಿ ಹೆಚ್ಚಿಗೆ ಷೇರು ಹೊಂದಿದ್ದರು ಅಥವಾ ಹೆಚ್ಚಿಗೆ ವ್ಯವಹಾರ ಮಾಡಿದ್ದರೂ ಸಹ ಮತದಾನದ ಹಕ್ಕು ಪ್ರತಿಯೊಬ್ಬ ಸದಸ್ಯರಿಗೆ ಒಂದೇ ಮತ ಎಂದು ಪರಿಗಣಿಸಲಾಗಿದೆ.

2) ಪ್ರತಿ ಹಣಕಾಸು ವರ್ಷದ ಕೊನೆಯಲ್ಲಿ ಯಾವುದೇ ಸಕ್ರಿಯ ಸದಸ್ಯರಿಗೆ ಅವರ ಪ್ರೋತ್ಸಾಹದ ಆಧಾರದ ಮೇಲೆ ಹೆಚ್ಚುವರಿ ಮತಗಳ ಹಂಚಿಕೆ ಆಗುವುದಿಲ್ಲ.

3) ಸದಸ್ಯತ್ವವು ಕೇವಲ ಉತ್ಪಾದಕ ಸಂಸ್ಥೆಗಳಿಂದ ಕೂಡಿದ್ದರೆ, ಹಿಂದಿನ ವರ್ಷದಲ್ಲಿ ಆಯಾ ಸಂಸ್ಥೆಗಳಿಂದ ಕಂಪನಿಯ ವ್ಯವಹಾರಗಳಲ್ಲಿ ಭಾಗವಹಿಸುವಿಕೆಯ ಆಧಾರದ ಮೇಲೆ ಮತದಾನದ ಹಕ್ಕುಗಳನ್ನು ಪರಿಗಣಿಸಲಾಗುವುದು. ನೋಂದಣಿಯ ಮೊದಲ ವರ್ಷದಲ್ಲಿ ಉಳಿಸಿ ಮತದಾನದ ಹಕ್ಕುಗಳನ್ನುಪ್ರತಿ ಸಂಸ್ಥೆ ಹೊಂದಿರುವ ಷೇರುಗಳ ಆಧಾರದ ಮೇಲೆ ನಿರ್ಧರಿಸಲಾಗುತ್ತದೆ.

4) ಸದಸ್ಯತ್ವವು ವ್ಯಕ್ತಿಗಳು ಮತ್ತು ಉತ್ಪಾದಕ ಸಂಸ್ಥೆಗಳಿಂದ ಕೂಡಿದ ಸಂದರ್ಭದಲ್ಲಿ, ಪ್ರತಿ ಸದಸ್ಯರಿಗೆ ಒಂದೇ ಮತದ ಆಧಾರದ ಮೇಲೆ ಮತದಾನದ ಹಕ್ಕುಗಳನ್ನು ಲೆಕ್ಕಹಾಕಲಾಗುತ್ತದೆ.

5) ಪ್ರತಿ ಸಕ್ರಿಯ ಸದಸ್ಯರಿಗೆ ಕನಿಷ್ಠ ಒಂದು ಮತ ಇರುತ್ತದೆ. ಆದರೆ ಹೊಸದಾಗಿ ಪ್ರವೇಶ ಪಡೆದ ಸದಸ್ಯರು ಕನಿಷ್ಠ ಆರು ತಿಂಗಳವರೆಗೆ (ಅಥವಾ ಮಂಡಳಿಯು ನಿರ್ದಿಷ್ಟಪಡಿಸಿದ ಅವಧಿಗೆ) ಯಾವುದೇ ಮತದಾನದ ಹಕ್ಕನ್ನು ಹೊಂದಿರುವುದಿಲ್ಲ.

## ಸದಸ್ಯತ್ವವನ್ನು ರದ್ದುಗೊಳಿಸುವುದು

ಕೆಳಗಿನ ಸಂದರ್ಭಗಳಲ್ಲಿ, ಸದಸ್ಯತ್ವವನ್ನು ವಶಪಡಿಸಿಕೊಳ್ಳಲಾಗುತ್ತದೆ:

- ಅವನ / ಅವಳ ಷೇರುಗಳನ್ನು ವರ್ಗಾಯಿಸುವ ಮೂಲಕ. ವರ್ಗಾವಣೆಯ ಸಂದರ್ಭದಲ್ಲಿ, ವರ್ಗಾವಣೆಯ ವ್ಯಕ್ತಿಯು ಷೇರುಗಳನ್ನು ವರ್ಗಾವಣೆದಾರರ ಹೆಸರಿನಲ್ಲಿ ನೋಂದಾಯಿಸುವವರೆಗೆ ಸದಸ್ಯರಾಗಿ ಮುಂದುವರಿಯುತ್ತಾರೆ;

- ಅವನ / ಅವಳ ಷೇರುಗಳನ್ನು ನ್ಯಾಯೋಚಿತವಾಗಿ ಮುಟ್ಟುಗೋಲು ಹಾಕಿಕೊಳ್ಳುವ ಮೂಲಕ;

- ತಮ್ಮ ಷೇರುಗಳನ್ನು ಸ್ವಇಚ್ಛೆಯಿಂದ ಒಪ್ಪಿಸಿಬಿಡುವ ಮೂಲಕ;

- ಸಾವು ಸಂಭವಿಸಿದ ಸಮಯದಲ್ಲಿ, ಷೇರುಗಳನ್ನು ಬೇರೆಯವರಿಗೆ ವರ್ಗಾವಣೆ ಮಾಡುವವರಿಗೆ ಅವನ / ಅವಳ ಷೇರುಗಳ ಹಣವು ಬಾಕಿ ಇರುತ್ತದೆ

- ಕಂಪನಿಯು ತನ್ನ ಸಂಸ್ಥೆಯ ನಿಯಮಾವಳಿಗಳ ಅಡಿಯಲ್ಲಿ ತನ್ನ ಹಕ್ಕನ್ನು ಚಲಾಯಿಸುವ ಮೂಲಕ ತನ್ನ ಷೇರುಗಳನ್ನು ಮಾರಾಟ ಮಾಡಿದಾಗ;

- ನ್ಯಾಯಾಲಯ ಅಥವಾ ಇತರ ಯಾವುದೇ ಸಮರ್ಥ ಪ್ರಾಧಿಕಾರದ ಆದೇಶದ ಮೂಲಕ ಷೇರುಗಳನ್ನು ಮುಟ್ಟುಗೋಲು ಹಾಕಿಕೊಂಡು ಮಾರಾಟ ಮಾಡುವ ಮೂಲಕ

- ದಿವಾಳಿಯಾಗಿದ್ದಾನೆಂದು ನಿರಾಕರಿಸುವ ಮೂಲಕ;

- ಷೇರುದಾರನ್ನು ದಿವಾಳಿಯಾಗಿದ್ದಾನೆಂದು ತೀರ್ಪಿನ ನಂತರ ಅಧಿಕೃತ ನಿಯೋಜಕರು ಷೇರುಗಳನ್ನು ನಿರಾಕರಿಸಿದಾಗ

## ಆಸಕ್ತಿಗಳ ಸಂಘರ್ಷ

- ಉತ್ಪಾದಕ ಕಂಪನಿಯ ವ್ಯವಹಾರದೊಂದಿಗೆ ಸಂಘರ್ಷದಲ್ಲಿರುವ ಯಾವುದೇ ವ್ಯಾಪಾರ ಆಸಕ್ತಿಯನ್ನು ಹೊಂದಿರುವ ಯಾವುದೇ ವ್ಯಕ್ತಿ ಆ ಕಂಪನಿಯ ಸದಸ್ಯನಾಗುವ ಹಾಗಿಲ್ಲ.

- ಉತ್ಪಾದಕ ಕಂಪನಿಯ ವ್ಯವಹಾರದೊಂದಿಗೆ ಸಂಘರ್ಷದಲ್ಲಿರುವ ಯಾವುದೇ ವ್ಯವಹಾರ ಆಸಕ್ತಿಯನ್ನು ಹೊಂದಿರುವ ಸದಸ್ಯನ ಸದಸ್ಯತ್ವವು ರದ್ದುಗೊಳ್ಳುತ್ತದೆ ಮತ್ತು ಸಂಸ್ಥೆಯ ನಿಯಮಾವಳಿಗಳ ಅನುಗುಣವಾಗಿ ಸದಸ್ಯನನ್ನು ತೆಗೆದುಹಾಕಲಾಗುತ್ತದೆ.



## ಅಂತಿಮ ಸಮೀಕ್ಷೆ

ಈಗ ನಾವು ಆಡಳಿತ ಕುರಿತಾದ ಈ ಕೈಪಿಡಿಯ ಕೊನೆಗೆ ಬಂದಿದ್ದೇವೆ. ದಯವಿಟ್ಟು ಕೈಪಿಡಿಯ ಆರಂಭವನ್ನು ನೆನಪಿಸಿಕೊಳ್ಳಿ, ಅಲ್ಲಿಯ ಆರಂಭಿಕ ಸಾಲಿನಲ್ಲಿ ನಾವು ಆಡಳಿತ ಕುರಿತಾದ ಕೆಲವು ಮೂಲ ಪ್ರಶ್ನೆಗಳಿಗೆ ಚೆನ್ನಾಗಿ ಉತ್ತರಿಸಿದ್ದೇವು.

ಈಗ ಈ ಕಲಿಕಾ ಕೈಪಿಡಿಯನ್ನು ಪೂರೈಸಿದ ನಂತರ ನಮ್ಮ ಅರ್ಥೈಸಿಕೊಳ್ಳುವಿಕೆಯನ್ನು ಮೌಲ್ಯಮಾಪನ ಮಾಡಲು ಅಂತಿಮ ಸಮಿಕ್ಷೇ ಮಾಡೋನ

ಹಾಗಾಗಿ, ಈ ಕೈಪಿಡಿಯ ಕುರಿತು ನಮ್ಮ ಕಲಿಕೆಯ ಆಧಾರದ ಮೇಲೆ ನಾವು ಮತ್ತಷ್ಟು ಪ್ರಶ್ನೆಗಳಿಗೆ ಉತ್ತರಿಸೋಣವೇ?

1. ರೈತ ಉತ್ಪಾದಕ ಸಂಸ್ಥೆಯಲ್ಲಿ ಸಕ್ರಿಯ ಸದಸ್ಯರು ಯಾರು?

2. ರೈತ ಉತ್ಪಾದಕ ಸಂಸ್ಥೆಯ ಸೇವೆಗಳ ಬಳಕೆಯು (ಪ್ರೋತ್ಸಾಹ/ಪೋಷಕಾಂಶ) ಹೇಗೆ ಸದಸ್ಯರ ಪ್ರಮುಖ ಕಾರ್ಯವಾಗಿದೆ?

3. ಸದಸ್ಯರನ್ನು ಸಂಘಟಿಸುವಲ್ಲಿ ಕ್ರೋಢಿಕರಣದ ವಿವಿಧ ಹಂತಗಳು ಯಾವುವು?

4. ರೈತ ಉತ್ಪಾದಕ ಸಂಸ್ಥೆಗಳಲ್ಲಿ ಸದಸ್ಯ ಕೇಂದ್ರೀಕೃತವಾಗಿರುವುದನ್ನು ಹೇಗೆ ಕಾಪಾಡಿಕೊಳ್ಳುವುದು?

5. ಸದಸ್ಯರ ಮತ್ತು ರೈತ ಉತ್ಪಾದಕ ಸಂಸ್ಥೆಗಳ ಮಟ್ಟದಲ್ಲಿ ನೀವು ಪ್ರಯೋಜನಗಳನ್ನು ಲಾಭಗಳನ್ನುಹೇಗೆ ಸಮತೋಲನಗೊಳಿಸುತ್ತೀರಿ?

# ಮಾಡ್ಯೂಲ್‌ನಿಂದ ತಿಳಿದುಕೊಳ್ಳುವ ಪ್ರಮುಖ ಕ್ರಿಯಾ ಅಂಶಗಳು

## ರೈತ ಉತ್ಪಾದಕ ಸಂಸ್ಥೆಗಳಲ್ಲಿ ಸದಸ್ಯತ್ವ

ರೈತ ಉತ್ಪಾದಕ ಸಂಸ್ಥೆಗಳಲ್ಲಿನ ಸದಸ್ಯತ್ವದ ಕುರಿತು ಈ ಮಾಡ್ಯೂಲ್‌ನಿಂದ ನಮ್ಮ ರೈತ ಉತ್ಪಾದಕ ಸಂಸ್ಥೆಗಳಿಗೆ ಉಪಯುಕ್ತವಾದ ಪ್ರಮುಖ ಕ್ರಿಯಾಶೀಲ ಅಂಶಗಳು ಯಾವುವು?

# ಗ್ರಂಥ ಋಣ


1. "ವಿನಿಮಯ" – ಮೆಂಬರ್‌ಶಿಪ್ಪ್ ಇನ್ ಫಾರ್ಮರ್ ಪ್ರೋಡ್ಯೂಸರ್ ಆರ್ಗನೈಜೇಷನ್ – ಮಹಿಳಾ ಅಭಿವೃದ್ಧಿ ಸೊಸೈಟಿ, ಮಣಿಕೊಂಡ ಹೈದ್ರಾಬಾದ್, ತೆಲಂಗಾಣ ದಿಂದ ಪ್ರಕಟವಾದ ತರಬೇತಿ ಕೈಪಿಡಿ – 2019

2. ರೈತ ಉತ್ಪಾದಕ ಸಂಸ್ಥೆಗಳ ನಿರ್ದೇಶಕ ಮಂಡಳಿಯ ಸಾಮರ್ಥ್ಯ ಬಲವರ್ಧನೆ – ಕಾನೂನಾತ್ಮಕ ಅನುಸರಣೆಗಳು – ತರಬೇತಿ ಮಾರ್ಗದರ್ಶಿ – ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರದ ಪ್ರಕಟಣೆ – 2020.

3. ರೈತ ಉತ್ಪಾದಕ ಸಂಸ್ಥೆಗಳ ನಿರ್ದೇಶಕ ಮಂಡಳಿಯ ಸಾಮರ್ಥ್ಯ ಬಲವರ್ಧನೆ – ರೈತ ಉತ್ಪಾದಕ ಸಂಸ್ಥೆಗಳ ಒಂದು ಅವಲೋಕನ – ತರಬೇತಿ ಮಾರ್ಗದರ್ಶಿ – ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರದ ಪ್ರಕಟಣೆ – 2020.

4. ರೈತ ಉತ್ಪಾದಕ ಸಂಸ್ಥೆಗಳ ನಿರ್ದೇಶಕ ಮಂಡಳಿಯ ಸಾಮರ್ಥ್ಯ ಬಲವರ್ಧನೆ –ರೈತ ಉತ್ಪಾದಕ ಸಂಸ್ಥೆಗಳ ವ್ಯವಹಾರ ಯೋಜನೆ– ತರಬೇತಿ ಮಾರ್ಗದರ್ಶಿ – ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರದ ಪ್ರಕಟಣೆ – 2020.


5. ಅಶೋಕ ಎಸ್. ಆಲೂರ ಹಾಗೂ ಇತರರು – ಫಾರ್ಮರ್ ಪ್ರೊಡ್ಯೂಸರ್ ಆರ್ಗನೈಜೇಷನ್ಸ್ ಆ್ಯನ್ ಇನ್ನೋವೇಟಿವ್ ಇನ್ಸ್ಟಿಟ್ಯೂಷನಲ್ ಅಪ್ರೋಚ್ ಫಾರ್ ಕಲೆಕ್ಟಿವ್ ಆ್ಯಕ್ಷನ್ ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ ಹಾಗೂ ನಬಾರ್ಡ್‌ನ ಪ್ರಕಟಣೆ – 2017.

6. ಆಲೂರ.ಎ.ಎಸ್., ರವೀಂದ್ರರ ರೆಡ್ಡಿ ಸಿ.ಎಚ್., ಗೌಡಾ ಸಿ.ಎಲ್. ಎಲ್. ರೆಡ್ಡಿ ಬಿ. ವ್ಹಿ., ರಾಯ್ ಕೆ.ಎನ್., ಪಾರ್ಥಸಾರಥಿ ರಾವ್ ಪಿ. ಹಾಗೂ ಸುನೀಲಕುಮಾರ ಎಸ್. (2008)ಬಿಲ್ಡಿಂಗ್ ಸ್ಟ್ರಾಂಗರ್ ಫಾರ್ಮರ್ಸ್ ಅಸೋಸಿಯೇಶನ್ಸ್, ಬೆಳೆ ಸುಧಾರಣೆ ಜಾಗತಿಕ ವಿಭಾಗ, ಅಂತರರಾಷ್ಟ್ರೀಯ ಅರೆಶುಷ್ಕ ಉಷ್ಣವಲಯಗಳ ಬೆಳೆ ಸಂಶೋಧನಾ ಕಂಪನಿ, ಪಟನ್‌ಚೆರು–502324, ಆಂಧ್ರಪ್ರದೇಶ.32 ಪುಟಗಳು

7. ಕಾರ್ಮನ್,ಕೆ ಹಾಗೂ ಕೀತ್ ಕೆ (1994). ಕಮ್ಯುನಿಟಿ ಕನಸಲ್ಟೇಶನ್ ಟೆಕ್‌ನಿಕ್ಸ್; ಪರಪಸ್, ಪ್ರೋಸಸ್ಸ್ ಆಂಡ್ ಪಿಟ್‌ಫಾಲ್ಸ್–ಎ ಗೈಡ್ ಫಾರ್ ಪ್ಲಾನರ್ಸ್ ಆಂಡ್ ಫೆಸಿಲಿಟೇಟರ್ಸ್ ಬ್ರಿಸೆಬೇನ್, ಡಿಪಾರ್ಟಮೆಂಟ್ ಆಫ್ ಪ್ರೈಮರಿ ಇಂಡಸ್ಟ್ರೀಸ್, ಕ್ವೀನ್ಸ್‌ಲ್ಯಾಂಡ್.

8. ಚಾಮಲಾ.ಎಸ್ (1990). ಎಸ್ಟ್ಯಾಬಿಶಿಂಗ್ ಎ–ಗ್ರೂಪ್; ಎ ಪಾರ್ಟಿಸಿಪೇಟಿವ್ಹ್ ಆಕ್ಷನ್ ಮಾಡಲ್ ಇನ್ ಎಸ್.ಚಾಮಲಾ ಮತ್ತು ಪಿ.ಡಿ. ಮಾರ್ಟನ್, ವರ್ಕಿಂಗ್ ಟುಗೆದರ್ ಫಾರ್ ಲ್ಯಾಂಡ್‌ಕೇರ್; ಗ್ರೂಪ್ ಮ್ಯಾನೇಜ್‌ಮೆಂಟ್ ಸ್ಕಿಲ್ಸ್ ಆಂಡ್ ಸ್ಟೆಟಜೀಸ್,ಪುಟಸಂಖ್ಯೆ 13–28, ಬ್ರಿಸ್‌ಬೇನ್, ಆಸ್ಟ್ರೇಲಿಯನ್ ಅಕಾಡೆಮಿ ಪ್ರೆಸ್.

# ಸದಸ್ಯರು ಮತ್ತು ರೈತ ಉತ್ಪಾದಕರ ಸಂಸ್ಥೆಗಳ ನಡುವಿನ ವಹಿವಾಟು






## ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ

ರಾಜ್ಯ ಮಟ್ಟದಲ್ಲಿ ರೈತ ಉತ್ಪಾದಕ ಸಂಸ್ಥೆಗಳಿಗೆ ಅವಶ್ಯಕವಿರುವ ಬೆಂಬಲ ಹಾಗೂ ಸಹಾಯ ನೀಡುವ ನಿಟ್ಟಿನಲ್ಲಿ ಒಂದು ಸಾಂಸ್ಥಿಕ ರಚನೆಯ ಅರಿವನ್ನು ಮನಗಂಡು ಕರ್ನಾಟಕ ಸರ್ಕಾರವು ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರವನ್ನು ಸ್ಥಾಪಿಸಿದೆ. ಈ ಸಂಸ್ಥೆಯು ರಾಜ್ಯದಲ್ಲಿರುವ ರೈತ ಉತ್ಪಾದಕ ಸಂಸ್ಥೆಗಳಿಗೆ ಅವಶ್ಯಕವಿರುವ ಮಾರ್ಗದರ್ಶನ, ಸಾಮರ್ಥ್ಯ ಬಲವರ್ಧನೆ, ತಾಂತ್ರಿಕ ಮಾಹಿತಿ, ವ್ಯವಹಾರ ಅಭಿವೃದ್ಧಿ ಸಂಬಂಧ ಪಟ್ಟಂತೆ ಹಾಗೂ ಇನ್ನಿತರ ವಿಷಯಗಳ ಬಗ್ಗೆ ಬೆಂಬಲ ಮತ್ತು ಸಹಕಾರ ನೀಡುವ ಮೂಲಕ ಈ ಸಂಸ್ಥೆಗಳ ಸದಸ್ಯ ರೈತರ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುತ್ತಿದೆ.

# ವಿನಿಮಯ - ರೈತ ಉತ್ಪಾದಕ ಸಂಸ್ಥೆಗಳಲ್ಲಿ ಸದಸ್ಯತ್ವ




## ಮಹಿಳಾ ಅಭಿವೃದ್ಧಿ ಸೊಸೈಟಿ – ಆಂಧ್ರ ಪ್ರದೇಶ (ಎಪಿಎಮ್ಎಎಸ್)

ಎಪಿಎಮ್ಎಎಸ್ ಒಂದು ರಾಷ್ಟ್ರ ಮಟ್ಟದ ಸರ್ಕಾರೇತರ ಸಂಪನ್ಮೂಲ ಸಂಸ್ಥೆಯಾಗಿದ್ದು ಸಂಸ್ಥೆಯು ಜನರ ಸಹಭಾಗಿತ್ವದ ಸಂಸ್ಥೆಗಳಾದ ಸ್ವಸಹಾಯ ಸಂಘಗಳು, ಸ್ವಸಹಾಯ ಸಂಘಗಳ ಒಕ್ಕೂಟಗಳು, ಸಹಕಾರಿ ಸಂಸ್ಥೆಗಳು, ರೈತ ಉತ್ಪಾದಕ ಸಂಸ್ಥೆಗಳು ಹಾಗೂ ಇತರೆ ಸಮುದಾಯ ಆಧಾರಿತ ಗುಂಪುಗಳ ಏಳಿಗೆಗಾಗಿ ಕಾರ್ಯಪ್ರವೃತ್ತವಾಗಿದೆ. ಈ ಸಂಸ್ಥೆಗಳು ಸ್ವಸಹಾಯ, ಪರಸ್ಪರ ಲಾಭ, ಅವರದೆ ಆದ ಜವಾಬ್ದಾರಿ ಹಾಗೂ ಸ್ವಾವಲಂಭನೆಯ ಮೌಲ್ಯಗಳನ್ನು ಆಧಾರದ ಮೇಲೆ ಕಾರ್ಯನಿರ್ವಹಿಸುವಂತಹ ಸಂಸ್ಥೆಗಳಾಗಿವೆ.

ವಿನ್ಯಾಸ ಮತ್ತು ಮುದ್ರಣ: ಇಂಡಿಗೋ ಮಲ್ಟಿಮೀಡಿಯಾ, ಬೆಂಗಳೂರು (9738181827)